"The names of Members may be announced at the time when the motion is taken into consideration."

*The motion was negatived.*

CLAUSES 2 and 3.

Mr. SPEAKER.—There are no amendments I will put the clauses. The question is :

"That clauses 2 and 3 stand part of the Bill."

*The motion was adopted.*

Clauses 2 and 3 were added to the Bill.

Sri DIGAMBAR RAO B. KALMANKAR.—I have also given notice of a similar motion for reference to Select Committee.

CLAUSE 1, etc.

Mr. SPEAKER.—How can I put the motion to the vote ? Does he know the consequences of the rejection of a similar motion ? His motion will not survive.

The question is :

"That clause 1, the Title and the Preamble stand part of the Bill."

***The motion was adopted.***

Clause 1, the Title and the Preamble were added to the Bill.

*Motion to pass.*

Sri B. RACHAIAH.—Sir, I beg to move :

"That the Land Acquisition (Mysore Amendment and Validation) Bill, 1967 be passed."

Mr. SPEAKER.—The question is :

"That the Land Acquisition (Mysore Amendment and Validation) Bill, 1967 be passed."

*The motion was adopted.*

## MYSORE SALES TAX (AMENDMENT) BILL, 1967

*Motion to consider*

Sri RAMAKRISHNA HEGDE (Minister for Finance and Planning).—Sir, I beg to move :

"That the Mysore Sales-tax (Amendment) Bill, 1967 be taken into consideration."

**Mr. SPEAKER.**—Motion moved :

" That the Mysore Sales Tax (Amendment) Bill, 1967 be taken into consideration."

**Sri M. NAGAPPA.**—As per Clause 3 of the Mysore Sales Tax (Amendment) Bill, 1967, the State Government may by notification make an exemption or reduction in the rate in respect of any tax payable under the Act. This is a new clause that is being added to the original Act. And secondly, under sub-clause (3) of the same Section, the State Government may, by notification cancel or vary any notification issued under sub-section (1). Then I will take this Hon. House to Clause 9 wherein substitution of new section for section 37 suggested. Then I will take this House to Clause 10 where again substitution of new section 39 is suggested. This Bill does not contain the Memoranda regarding delegated legislation as required under Rules of Procedure.

**Mr. SPEAKER.**—The memorandum has been circulated.

**Sri M. NAGAPPA.**—The memorandum relating to only the Mysore Land Reforms Bill, has been circulated.

**Mr. SPEAKER.**—I have got a printed copy. If it is not supplied, I will have it supplied.

**Sri M. NAGAPPA.**—I say we have not got it.

**Mr. SPEAKER.**—I will see that it is given. I do not know why it has not been given. Secretary will kindly send them copies. It is a small matter which need not be magnified.

ಶ್ರೀ ವಿ. ಪಿ. ಐತಾಳ.—ನಾನೊಂದು ಕ್ರಿಯಾತ್ಮೋಪವನ್ನು ಸೂಚಿಸಬೇಕಾಗಿದೆ. ಇದುವರೆಗೆ ಈ ಮಸೂದೆ ಸುಮಾರು 50—60 ತಿದ್ದುಪಡಿಗಳಾಗಿರಬಹುದು. ಈಗ ತರುವ ತಿದ್ದುಪಡಿ ಎಲ್ಲಿ ಯಾವುದಕ್ಕೆ ಜೋಡಿಸಬೇಕು ಎಂಬುದು ಅರ್ಥವಾಗುವುದಿಲ್ಲ. ಆದಕಾರಣ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ 1-10-57 ರಿಂದ ಮುದ್ರಿಸಿರುವ ಆಕ್ಟಿನ ಕಾಪಿಯನ್ನು ನಮಗೆ ಕೊಡಬೇಕು, ಅದಿಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

**Sri B. P. GANGADHAR** (Tumkur).—I support that contention that every one of us may be supplied with the copy of the Memorandum regarding delegated legislation. Otherwise we will not be in a position to understand the modifications suggested. By merely reading that one word may be substituted for another, nothing can be made. If we do not have relevent provisions of the Acts, we will not be able to find out what exactly the matter is.

**Mr. SPEAKER.**—Now the members do not seem to know correctly, what a point of order is. If there is slight difficulty in understanding things, they raise a point of order.

**Sri B. P. GANGADHAR.**—It is only a request; no point of order. With a view to bestow our best attention and come to some correct conclusions on the Bill, before we delivered our addresses, we drew your kind attention. That is all.

Mr. SPEAKER.—Sri Aithala raised a point of order. Mr. Gangadhar went ahead in supporting it. Now he says, no point of order was raised.

Sri C. K. RAJAIAH SETTY (Chicknaikanahalli).—There is clear support for the contention. In the clause it is stated that 3 per cent shall be substituted; whereas if we look to the schedule, there is no two per cent; there is only one per cent. It clearly shows that the provision has been further amended. The schedule printed should be of some original Act and not from the Act which is at present sought to be amended.

Mr. SPEAKER.—I fully sympathise with this hon. Member. I am sending him a copy of the Bill which is moved. The copy in his hand is obviously not the one that has been moved. He may Kindly look in to it.

Sri Aithal's point of order is that there are 50 amendments which have taken place and that, therefore, it becomes difficult to place exactly his hand.

Sri B. P. GANGADHAR.—Please don't take it literally, Sir. The intention is clear. He meant large number of amendments.

Mr. SPEAKER.—I was saying what he stated. Why does the member feel so sensitive and all that?

Sri B. P. GANGADHAR.—I take the spirit in which he said and did not actually count the number of amendments, so far done.

Mr. SPEAKER—Still, there is no point of order. Can I impose a limit?

Sri C. K. RAJAIAH SETTY —There is some difference when compared with this second Bill. A wrong copy is supplied.

Mr. SPEAKER.—A point of order must relate to interpretation of Rule or an article of the Constitution relating to the procedural matters. On facts if there is any mistake, it does not amount to a point of order. On the point whether this Bill should be discussed or is it a matter to be decided in the House, it was agreed that it should be moved; and that is why, it has been called upon and it has been moved. Members sit quiet. After all agreements are reached and the matter is moved, they raise objections. It was even agreed in the Business Advisory Committee that the Bill woule be over today. How far it will be done is a matter to be seen. Whoever wants, let him participate in the debate.

Sri AZEEZ SAIT.—Where is the memorandum? In spite of my going through it, I donnt find it.

Mr. SPEAKER.—The hon. Member may please see page 11 of the Bill. For this, three minutes are exhausted.

seeking to amend

Sri RAMAKRISHNA HEGDE.—Sir, this is a Bill briefly stated in the Sales Tax Act. The Objects and Reasons have been re as follows :—
the Draft Bill itself. The salient features of the Bill a

Firstly, subsequent to the amendment of the Central Sales Tax Act, after the Budget Session, permission was given to enhance the tax under Schedule IV on declared goods. As hon. Members know, the rate of tax at persent in this regard ranges between 1½ per cent and 2 per cent. It is sought to increase this rate to three per cent. Secondly, it is also sought by the amendment of the persent Act to take power to give exemption from levy of tax with a view to encourage the establishment of new industries. I may state here that recently representatives of various trade organisations and associations have met me and discussed various difficulties they have to face in regard to certain aspect of the implementation of this Act. They have been representing to the Government in regard to certain goods, commodities and component parts that the tax rate is much higher than the rate in the neigebouring States, which has resulted in diversion of trade.

5-00 P.M.

Sir, with a view to give relief to entrepreneurs who want to start new industries and also with a view to see that large scale diversion of trade does not take place which would ultimately result in loss to Government, this amendmant has been made. These are the most important features and there are also certain minor amendments which relate to procedure and which were also necessary in view of the Supreme Court decision. This is not a controversial Bill. I hope the House will approve this Bill.

I might add that on account of the amendment in regard to the rate of tax about declared goods, the total revenue expected will be something between 30 to 35 lakhs of rupees per annum. Thank you, Sir.

†ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಅರ್ಥಿಕ ಸಚಿವರು ಈ ಮೈಸೂರು ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ 1967 ನ್ನು ನಮ್ಮ ಮುಂದೆ ಇಟ್ಟು ಒಪ್ಪಿಗೆ ಕೊಡಬೇಕೆಂದು ಕೇಳಿದ್ದಾರೆ. ಮಾನ್ಯ ಸಚಿವರು ಈ ಹಣಕಾಸಿನ ಸಚಿವರ ಜೊತೆಗೆ (ಎಕ್ಸ್ ಕ್ಯಾಸ್) ಹೆಂಡತಿ ಮಾತಾಡದ ಖಾತೆಯ ಸಚಿವರೂ ಕೂಡ ಆಗಿದ್ದಾರೆ. ಈಗ ಪ್ರೊಹಿಬಿಷನ್‌ಗೆ ತಿರಾಂಜಲಿಯನ್ನು ಕೊಟ್ಟಿರುವುದರಿಂದ ಇದರ ಅವಶ್ಯಕತೆ ಇರಬಾರದು. ಪ್ರೊಹಿಬಿಷನನ್ನು ಜಾರಿಗೆ ತರುವುದಕ್ಕೋಸ್ಕರ ಸೇಲ್ಸ್ ಟ್ಯಾಕ್ಸನ್ನು ಜಾರಿಗೆ ತಂದದ್ದಾಯಿತು. ಮಾನ್ಯ ಸಚಿವರು ಹೆಂಡ ಕುಡಿಯುವುದನ್ನು ಜಾರಿಗೆ ತಂದಿರುವುದರಿಂದ ಈ ಸೇಲ್ಸ್ ಟ್ಯಾಕ್ಸನ್ನು ಕತ್ತು ಹಾಕಿದ್ದೇಪೆ ಎಂದು ಹೇಳತಕ್ಕ ಬಿಲ್ಲನ್ನು ತಂದಿದ್ದರೆ ಅವರಿಗೆ ಮೆಚ್ಚುಗೆಯನ್ನು ಕೊಡುವುದಕ್ಕೆ ಅವಕಾಶವಾಗುತ್ತಾ ಇತ್ತು. ಈಗ ಪ್ರೊಹಿಬಿಷನನ್ನೂ ಕೂಡ ತೆಗೆದು ಹಾಕಿ ಇದೇ ಸಂದರ್ಭದಲ್ಲಿ ಈ ಒಂದು ಸೇಲ್ಸ್ ಅಮೆಂಡ್‌ಮೆಂಟನ್ನೂ ತಂದಿರುವುದು ಅಷ್ಟು ಹಿತವಾಗಿ ಕಾಣುವುದಿಲ್ಲ. ಈ ಸರ್ಕಾರದವರಿಗೆ ಬಕಾಸುರನ ಹೊಟ್ಟೆಯ ಹಾಗೆ ಎಷ್ಟು ಟ್ಯಾಕ್ಸ್ ಬಂದರೂ ಕೂಡ ಸಾಲದು. ಹೊಸ ಹೊಸ ಟ್ಯಾಕ್ಸ್‌ಗಳನ್ನು ಹುಡುಕಿ, ಜನಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿ, ಜನರಿಗೆ ಈ ಕಷ್ಟಕಾಲದಲ್ಲಿ ಹೆಚ್ಚು ಹೆಚ್ಚಿನ ಕಷ್ಟವನ್ನು ಒದಗಿಸುತ್ತಾ ಇದ್ದಾರೆ. ಅವರು ಈಗ ಪ್ರೊಡಕ್ಷನ್ ಹೆಚ್ಚಾಗಬೇಕು ಎನ್ನತಕ್ಕ ಉದ್ದೇಶವನ್ನು ಇಟ್ಟುಕೊಂಡು—ನಮ್ಮಲ್ಲಿ ಬೇಕಾದಷ್ಟು ಪವರ್ ಇದೆ ಪವರ್‌ನಲ್ಲಿ ಕನ್‌ಸೆಷನ್ ಕೊಟ್ಟು, ಟ್ಯಾಕ್ಸ್‌ನಲ್ಲೂ ಕೂಡ ಕನ್‌ಸೆಷನ್ ತೋರಿಸಿ ಮತ್ತು ಕೆಲಸಗಾರರು ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡಿ, ಶ್ರದ್ಧಾಭಕ್ತಿಯಿಂದ ಉತ್ಪಾದನೆಯನ್ನು ಹೆಚ್ಚು ಮಾಡುವ ರೀತಿಯಲ್ಲಿ ಅವಕಾಶ ಮಾಡುವ ಹಾಗೆ ಒಂದು ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದ ಪಕ್ಷದಲ್ಲಿ ಈ ದೇಶದ ಆರ್ಥಿಕ ಪರಿಸ್ಥಿತಿ ಇಷ್ಟೊಂದು

ಹೊಲಸು ಆಗುತ್ತಾ ಇರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಈ ತಿದ್ದುಪಡಿ ಬಿಲ್ ಪ್ರಕಾರ ಮುಖ್ಯವಾಗಿ ಹೊಸದಾಗಿ ಪ್ರಾರಂಭಮಾಡತಕ್ಕ ಕೆಲವು ಕೈಗಾರಿಕೆಗಳಿಗೆ ಸೇಲ್ಸ್ ಟ್ಯಾಕ್ಸ್ ಏನಾಯಿತಿ ಕೊಡತಕ್ಕಂತಹ ಒಂದು ನಿಬಂಧನೆ ಇದರಲ್ಲಿ ಇದೆ. ಇದುವರೆಗೂ ಇದ್ದಂಥ ಕಾಯಿದೆಯಲ್ಲಿ ಈ ಎಕ್ಸ್‌ಂಪ್ಷನ್ ಕೊಡತಕ್ಕ ಅಧಿಕಾರ ಸರ್ಕಾರದವರಿಗೆ ಪೂರ್ಣವಾಗಿ ಇರಲಿಲ್ಲ. ಈ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ 8 (ಎ) ಆನ್ನತಕ್ಕ ಒಂದು ಹೊಸ ಕಲಂನ್ನು ಇದರಲ್ಲಿ ಸೇರಿಸಿದ್ದಾರೆ. ಈ ಕ್ಲಾಸ್‌ನ ಬಗ್ಗೆ ನನ್ನ ಟೀಕೆ ಆದರೂ ಇಷ್ಟೆ,ಅನೇಕ ಹಳೇ ಇಂಡಸ್ಟ್ರೀಸ್ ಉತ್ತೇಜನ ಇಲ್ಲದೇ ನಾನಾ ಕಾರಣಗಳಿಂದ ಮುಚ್ಚುವ ಸ್ಥಿತಿಗೆ ಬರುತ್ತಾ ಇವೆ. ಹೊಸ ನೀರು ಬಂದು ಹಳೇ ನೀರನ್ನು ಕೊಚ್ಚಿಕೊಂಡು ಹೋಯಿತು ಅಂತ, ರೆಸಿಷನ್ ಮತ್ತು ಇತರ ನಾನಾ ಕಾರಣಗಳಿಂದ ಅನೇಕ ಇಂಡಸ್ಟ್ರೀಸ್ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಅವಕಾಶವಿಲ್ಲದೆ ಮುಚ್ಚುವ ರೀತಿಯಲ್ಲಿ ಇವೆ, ಮುಚ್ಚಿಯೂ ಹೋಗಿವೆ. ಹಳೇ ಇಂಡಸ್ಟ್ರೀಸ್ ಮುಚ್ಚುವ ಸ್ಥಿತಿಯಲ್ಲಿರುವಾಗ ಅವನ್ನು ಸರಿಪಡಿಸಿ, ಸರಿಯಾದ ರೀತಿಯಲ್ಲಿ ಉತ್ಪಾದನೆ ಆಗುವುದಕ್ಕೆ ಅವಕಾಶವಾಗತಕ್ಕ ಒಂದು ಕಾನೂನನ್ನು ತರದೇ ಈಗ ಹೊಸ ಇಂಡಸ್ಟ್ರೀಗಳಿಗೆ ಉತ್ತೇಜನ ಕೊಡುತ್ತೇವೆ ಅಂತ ಹೇಳಿ ಈ ಟ್ಯಾಕ್ಸ್‌ನ್ನು ಎಕ್ಸೆಂಪ್ಷನ್ ಮಾಡುವುದಕ್ಕೆ ಅಥವಾ ಒಂದು ರಿಯಾಯಿತಿಯನ್ನು ಕೊಡುವುದಕ್ಕೆ ಅವಕಾಶಮಾಡಿಕೊಡತಕ್ಕ ನಿಬಂಧನೆಯನ್ನು ತಂದಿದ್ದೀರಿ. ಹೊಸ ಹೊಸ ಕೈಗಾರಿಕೆಗಳು ಬರಬೇಕು, ನ್ಯಾಯ, ಒಪ್ಪಿಕೊಳ್ಳತಕ್ಕದ್ದೇ, ಆದರೆ ಇಂತಹ ಕಾಯಿದೆಗಳನ್ನು ತಂದು ಸರಿಯಾದ ರೀತಿಯಲ್ಲಿ ಸರ್ಕಾರದವರು ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆಯೇ ಎಂದರೆ ತಮಗೆ ಬೇಕಾದವರಿಗೆ ಬೇಕಾದ ಸೌಲತ್ತುಗಳನ್ನು ಕೊಟ್ಟು ಆದರಿಂದ ಫರೋಕ್ಷವಾದಂತಹ ಒಂದು ಪ್ರತಿಫಲವನ್ನು ಪಡೆಯುವುದಕ್ಕೆ ಇದು ಅನುಕೂಲವಾಗಿದೆ ಎಂಬ ಅಂಶವನ್ನು ನಾವು ಇಲ್ಲಿ ತೀವ್ರವಾಗಿ ಗಮನಿಸಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಕೆಲವು ಇಂಡಸ್ಟ್ರೀಗಳಿಗೆ ಸಾಕಾದಷ್ಟು ಹಣಕಾಸಿನ ಸಹಾಯ ಇಲ್ಲದೇ ಮುಳುಗುವ ಸ್ಥಿತಿಯಲ್ಲಿವೆ. ಎಸ್ಸೆಂಟ್ಷಿಯಲ್ಲಿಷ್ ಆಗಿ, ಬೇಕಾದಷ್ಟು ಕ್ಯಾಪಿಟರ್ ಹಾಕಿದ್ದಾರೆ, ಅವರಿಗೆ ಸರ್ಕಾರದವರು ಸಾಲ ಕೂಡ ಕೊಟ್ಟಿದ್ದಾರೆ. ಅಂತಹ ಇಂಡಸ್ಟ್ರೀಗಳಿಗೆ ಪವರ್ ವಿಚಾರದಲ್ಲಾ ಮತ್ತು ಟ್ಯಾಕ್ಸ್ ವಿಚಾರದಲ್ಲೂ ಮೊದಲು ಉತ್ತೇಜನ ಕೊಟ್ಟು ಅನಂತರ ಹೊಸದಾಗಿ ಆರಂಭವಾಗುವ ಇಂಡಸ್ಟ್ರೀಗಳಿಗೆ ಉತ್ತೇಜನ ಕೊಟ್ಟಿದ್ದರೆ ಚೆನ್ನಾಗಿತ್ತೋ ಏನೋ. ಕಳೆದ ಒಂದು ವರ್ಷದಿಂದ ಕಲ್ಕತ್ತಾದಿಂದ ಕೆಲವು ಇಂಡಸ್ಟ್ರೀಸ್‌ಗಳವರನ್ನು ಬೊಂಬಾಯಿನಿಂದ ಕೆಲವು ಇಂಡಸ್ಟ್ರೀಸ್‌ಗಳವರನ್ನು ಇಲ್ಲಿಗೆ ಬರಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ಪರದೇಶದ ಕೆಲವು ಇಂಡಸ್ಟ್ರೀಗಳನ್ನು ತರುವುದಕ್ಕೂ ಕೂಡ ಮಾನ್ಯ ಅರ್ಥ ಸಚಿವರು ಹೋಗಿ ಒಂದು ವಿಶ್ವ ಪರ್ಯಟನ ಮಾಡಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಏನೇನು ಆಗಿದೆ ಎಂಬ ಒಂದು ವಿವರವನ್ನಾದರೂ ಸಭೆಯ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಈ ಸಂದರ್ಭದಲ್ಲಿ ಇದರ ಬಗ್ಗೆ ನನ್ನ ಭಯವಾದರೂ ಇಷ್ಟೆ. ಈ ಕಾಯಿದೆ ಅನೇಕ ಸಂದರ್ಭಗಳಲ್ಲಿ ದುರುಪಯೋಗವಾಗಬಹುದು. ಯಾರಿಗೆ ಸಹಾಯವಾಗಬೇಕು ಎಂದು ಉದ್ದೇಶವಿದೆಯೋ, ಯಾರು ಬಹಳ ಕಷ್ಟದಲ್ಲಿ ಇರತಕ್ಕವರೋ ಅವರಿಗೆ ಸಹಾಯವಾಗಲಾರದೆ ಪ್ರಭಾವ ಬೀರತಕ್ಕವರಿಗೆ ಮಾತ್ರ ಸಹಾಯವಾಗಬಹುದು ಎಂಬ ಶಂಕೆ ಇದೆ. ಈ ಶಂಕೆಯನ್ನು ಹೇಗೆ ಬಗೆಹರಿಸುತ್ತಾರೆಯೋ ನನಗೆ ಅರ್ಥವಾಗುವುದಿಲ್ಲ. ಇದರ ಜೊತೆಗೆ—

> "The State Government may, by notification, cancel or vary any notification issued under sub-section (1)"

ಎಂದು ಒಂದು ಸೇಫಿಂಗ್ಸ್ ಕ್ಲಾಸ್ ಇಟ್ಟುಕೊಂಡಿದ್ದೀರಿ, ಸಂತೋಷ. ಆದರೆ :

> "If any restr ction or condition specified under sub-section (2) is contravened or is not observed by a dealer, the sales or purchases of such dealer may, with effect from the commencement of the year in which such contravention or non-observance took place, be assessed to tax or taxes under the appropriate provisions of this Act as if the provisions of the notification under sub-section (1) did not apply to such sales or purchases".

ಇದು ಬಹಳ ಕಠಿಣವಾದ ಕ್ಲಾಸ್ ಅಂತ ಕಾಣುತ್ತದೆ. ಯಾರಾದರೂ ಕೊಟ್ಟಿರತಕ್ಕ ಕನ್‌ಸೆಷನ್‌ನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ಅವರಿಗೆ ಒಂದು ವರ್ಷದ ಉತ್ಪನ್ನಕ್ಕೂ ಕೂಡ ಹೆನಾಲ್ಟಿ ಹಾಕಬಹುದು ಎಂದು ಹೇಳಿದ್ದೀರಿ. ಇದು ಸರಿಯೇ, ಶಾಸ್ತಿಯೇ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ವಿವರ ಕೊಟ್ಟರೆ ಚೆನ್ನಾಗಿರುತ್ತದೆ.

(ಶ್ರೀ ಟಿ. ಆರ್. ಶಾಮಣ್ಣ)

[Mr. Chairman (Sri S. D. KOTHAVALE) in the Chair].

ಇದೇ ನಂದರ್ಭದಲ್ಲಿ ನಾನಾಗಲೇ ಹೇಳಿರುವಂತೆ ಈ ಮಾರಾಟ ತೆರಿಗೆಯನ್ನು ನಂಪೂರ್ಣವಾಗಿ ಕಿತ್ತುಹಾಕಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ. ಆದರಲ್ಲೂ ಈಗಿರತಕ್ಕ ಪರಿಸ್ಥಿತಿಯಲ್ಲಿ ಇದನ್ನು ನಂಪೂರ್ಣವಾಗಿ ಕಿತ್ತುಹಾಕುವುದಕ್ಕೆ ಸಾಧ್ಯವಾಗದಿದ್ದರೆ ಆಹಾರಧಾನ್ಯಗಳ ಮೇಲೆ ಹಾಕಿರತಕ್ಕ ಮಾರಾಟ ತೆರಿಗೆಯನ್ನಾದರೂ ಕಿತ್ತುಹಾಕಬೇಕೆಂದು ಹೇಳುತ್ತೇನೆ. ಏಕೆಂದರೆ ಜನಗಳಿಗೆ ಈಗಲೇ ಬಹಳ ತೊಂದರೆಯಾಗಿದೆ. ಅನೇಕ ನಾಗರೀಕರಿಗೆ ಗೊತ್ತಿರುವ ಹಾಗೆ ಇತ್ತೀಚೆಗೆ ಹಾಲಿನ ದರವನ್ನು ಒಂದು ರೂಪಾಯಿನಿಂದ ಒಂದು ರೂಪಾಯಿ 20 ಪೈಸೆಗಳಿಗೆ ಏರಿಸಿದ್ದಾರೆ. ನೀರಿನ ದರವನ್ನು ಕಂಡ್ಡಾಬಟ್ಟೆ ಏರಿಸಿದ್ದಾರೆ. 1.30 ಇದ್ದುದನ್ನು 2.70 ಕ್ಕೆ ಏರಿಸಿದ್ದಾರೆ. ಬಸ್ ದಂಗಳನ್ನು ಏರಿಸಿದ್ದಾರೆ, ಮನೆಗಂದಾಯವನ್ನು ಏರಿಸಿದ್ದಾರೆ, ಅದರ ಪರಿಣಾಮದಿಂದ ಮನೆ ಬಾಡಿಗೆಗಳು ಹೆಚ್ಚಿತು. ನಾಮಾನುಗಳ ಬೆಲೆ ಗಗನಕ್ಕೇರಿದೆ. ತೊಗರಿ ಬೆಳೆ 1.50 ಇತ್ತು; ಹೋದ ವರ್ಷ. ಈ ವರ್ಷ ಅದು 2.50 ಕ್ಕೇರಿದೆ; ಕೆಲವು ನಲ 3.00 ರೂಪಾಯಿಗಳಾಗಿದ್ದುದೂ ಉಂಟು. ನಕ್ಕರೆ ಬೆಲೆಯನ್ನು ಹೆಚ್ಚಿಸಿದ್ದಾರೆ. ಅಕ್ಕಿ ರಾಗಿ ಮತ್ತು ಜೋಳ ಹೀಗೆ ಎಲ್ಲಾ ಧಾನ್ಯಗಳ ಬೆಲೆಯೂ ಗಗನಕ್ಕೇರಿರುತ್ತವೆ. ಜನಸಾಮಾನ್ಯರಿಗೆ ತಿನ್ನುವ ಅನ್ನ, ಉಡುವ ಬಟ್ಟೆ ಮತ್ತು ವಾನದ ಮನ ಇಲ್ಲದೆ ಕಂಗಾರಾಗಿದ್ದಾರೆ. ಜನ ಜೀವನ ಯಾವಾಗ ಕುಸಿದು ಬೀಳುವುದೋ ಅನ್ನುವಂಥ ಪರಿಸ್ಥಿತಿ ಒದಗಿದೆ. ಆದುದರಿಂದ ಇಂಥ ಕಷ್ಟ ಪರಿಸ್ಥಿತಿಯಲ್ಲಿ ಈ ಮಲ್ಟಿಪಾಯಿಂಟ್ ತೆರಿಗೆಯನ್ನಾದರೂ ತೆಗೆದು ಹಾಕಿದ್ದರೆ ದೇಶದಲ್ಲರತಕ್ಕ ಬಡಬಗ್ಗರಿಗೆ ಬಹಳ ಅನುಕೂಲವಾಗುತ್ತಿತ್ತು. ತಾವು ಅವರಿಗೆ ಬಹಳ ಉಪಕಾರ ಮಾಡಿದಂತಾಗುತ್ತಿತ್ತು. ಮುಂದೆ ಈ ಅಧಿಕಾರಸ್ಥಾನಕ್ಕೆ ತಾವೇ ಇನ್ನೊಮ್ಮೆ ಬರಬಹುದಾಗಿತ್ತು. ಇತ್ತೀಚೆಗೆ ಸರ್ಕಾರದವರು ಎಕ್ಸೈಜ್ ಬಾಬನ್ನು ಪುನಃ ಜಾರಿಗೆ ತಂದುದರಿಂದ ಅವರಿಗೆ 6—7 ಕೋಟಿ ರೂಪಾಯಿಗಳ ಒಂದು ಹೆಚ್ಚಿನ ಆದಾಯ ಬರುತ್ತದೆ. ಅಂಥ ಆದಾಯ ಬರತಕ್ಕ ಕಾಲದಲ್ಲಿ ಈ ಬಡಬಗ್ಗರ ಮೇಲೆ ಬೀಳತಕ್ಕ ತೆರಿಗೆಯನ್ನು ಕೈಬಿಡಬಹುದಾಗಿತ್ತು.

ಇನ್ನು ಈ ಮಾರಾಟ ತೆರಿಗೆಯನ್ನು ವಸೂಲು ಮಾಡತಕ್ಕ ವಿಚಾರದಲ್ಲಿ ಹೇಳುವುದಾದರೆ ಈ ಒಂದು ಬಾಬಿನಲ್ಲಿ ಜನರಿಗೆ ಆಗುವಷ್ಟು ಕಿರುಕುಳ ಇನ್ನಾವ ಬಾಬಿನಿಂದಲೂ ಆಗುವುದಿಲ್ಲವೆಂದು ಹೇಳುತ್ತೇನೆ. ಒಂದು ಕಡೆ ಲಂಚಕೋರ ಅಧಿಕಾರಿಗಳಿರುವುದರಿಂದ ಅವರ ನೀತಿ ಮಟ್ಟ ಕುಸಿದು ಬಿದ್ದು ಸರ್ಕಾರಕ್ಕೆ ಬರಬೇಕಾದ ತೆರಿಗೆಯ ಹಣ ನರಿಯಾಗಿ ಬರುತ್ತಿಲ್ಲ, ವಸೂಲು ಬದ್ದುಹೋಗಿದೆ. ಇನ್ನೊಂದು ಕಡೆ ಅನೀತಿಯುತರಾದ ವರ್ತಕರು ಲಂಚ ರುಷವತ್ತುಗಳನ್ನು ಕೊಡುವುದರ ಮೂಲಕ ಸರ್ಕಾರಕ್ಕೆ ಒಂದು ಕಡೆ ದ್ರೋಹ ಮಾಡುವುದಲ್ಲದೆ ಇತ್ತ ಜನತೆಗೂ ದ್ರೋಹ ಮಾಡುತ್ತಿದ್ದಾರೆ. ಈ ಮಾರಾಟ ತೆರಿಗೆಯನ್ನು ನರಿಯಾಗಿ ವಸೂರ್ಮಾಡಿದ್ದರೆ ಸರ್ಕಾರದವರು ಯಾವ ಒಂದು ಹೊಸ ತೆರಿಗೆಯನ್ನೂ ಹಾಕಬೇಕಾದ ಅವಶ್ಯಕತೆ ಇರಲಿಲ್ಲ. ಆಹಾರ ಧಾನ್ಯಗಳ ಮೇಲೆ ತೆರಿಗೆ ಹಾಕತಕ್ಕ ಅಗತ್ಯವಿರಲಿಲ್ಲ. ರಾಜ್ಯದಲ್ಲಿ ಪಾನನಿರೋಧನನ್ನು ರದ್ದುಮಾಡಿದ ಮೇಲೂ ಸರ್ಕಾರದವರು ಈ ತೆರಿಗೆ ಬಿಲ್ಲನ್ನು ತಂದುದು ಬಹಳ ಆಶ್ಚರ್ಯ. ಆದುದರಿಂದ ನಾವು ಸರ್ಕಾರದವರ ವರ್ತನೆಗೆ ಯಾವ ರೂಪದಲ್ಲೂ ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಕ್ಕಾಗುವುದಿಲ್ಲ. ಈ ಅಮೆಂಡ್‌ಮೆಂಟಿನ ಆಕ್ಟಿನಲ್ಲರತಕ್ಕ ಕ್ಲಾಜ್ (4) ರಲ್ಲಿ ಹೀಗೆ ಹೇಳಿದ್ದಾರೆ:

> "Notwithstanding anything contained in sub-section (1), in the case of goods taxable at the point of purchase by the last dealer in the State liable to tax under this Act, the commission agent (other than the agent of a non-resident principal) purchasing such goods shall not be assessed to tax but the principal who has effected such purchase through the commission agent shall be assessed to tax, as if he is the last dealer in the State".

ಇಲ್ಲಿ ಏಜಂಟರಾಗಿ ಮತ್ತು ಪ್ರಿನ್‌ಸಿಪಾಲ್ ಆಗಿ ಡೀಲ್ ಮಾಡತಕ್ಕವರಲ್ಲಿ ಒಂದು ವ್ಯತ್ಯಾಸ ವಿರುವುದರಿಂದ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಾಗಬಹುದೇನೋ ಎಂಬ ಶಂಕೆ ಇದೆ.

ಇನ್ನು ಸೆಕ್ಷನ್ (8) ರಲ್ಲಿ ರೆಕ್ಕಪತ್ರಗಳನ್ನು ಇಡುವುದು ಮತ್ತು ಅವುಗಳ ತನಿಖೆ ಹಾಗೂ ಅವುಗಳ ಬಗ್ಗೆ ರೈಸ್ ಮಾಡತಕ್ಕ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಕ್ರಮಗಳನ್ನು ಕೈಗೊಂ

ದರೂ ಅನೇಕ ವರ್ತಕರು ತೆರಿಗೆಯನ್ನು ತಪ್ಪಿಸಿಕೊಳ್ಳಲು ರಾಮನ ಲೆಕ್ಕ—ಕೃಷ್ಣನ ಲೆಕ್ಕ ಅಂತ ಹೇಳಿ ಒಂದು ಲೆಕ್ಕವನ್ನು ತೆರಿಗೆ ಕೊಡತಕ್ಕವರ ಸಮಜಾಯಿಷಿಗಾಗಿಯೂ ಇನ್ನೊಂದು ಲೆಕ್ಕವನ್ನು ತಮ್ಮ ಸ್ವಂತಕ್ಕಾಗಿಯೂ ಇಟ್ಟುಕೊಳ್ಳುತ್ತಾರೆ. ಆದಕಾರಣ ಈ ರಾಮಕೃಷ್ಣರ ಲೆಕ್ಕಗಳನ್ನು ಪತ್ತೆಮಾಡುವುದಕ್ಕೆ ಸರಿಯಾದ ಕ್ರಮವನ್ನು ಕೈಗೊಳ್ಳಬೇಕು. ಇಲ್ಲಿ ರೆಸಿಡೆನ್‌ಷಿಯಲ್ ಜಾಗಗಳನ್ನು ಬಿಟ್ಟು ಬಾಕಿ ಎಲ್ಲಾ ಕಡೆಗಳಲ್ಲೂ ರೈಸ್ ಮಾಡಬಹುದೆಂದು ಹೇಳಿದೆ. ಆದರೆ ಅಧಿಕಾರಿಗಳು ಲಂಚ ಬಂದ ಕಡೆ ಒಂದು ರೀತಿ ಲಂಚ ಕೊಡದ ಕಡೆ ಮತ್ತೊಂದು ರೀತಿಯಾಗಿ ವರ್ತಿಸುತ್ತಾರೆ. ಈ ವಿಚಾರದಲ್ಲಿ ನೊನ್ನೆತಾನೆ ಹೈಕೋರ್ಟಿನಲ್ಲಿ ಒಂದು ಕೇಸು ತೀರ್ಮಾನವಾಗಿದೆ. ಜನರಿಗೆ ಯಾವ ಯಾವ ರೀತಿ ತೊಂದರೆಯಾಗುತ್ತದೆ ಎಂಬುದನ್ನು ವಿಚಾರಮಾಡಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸದಂತೆ ಅದನ್ನು ತಡೆಗಟ್ಟುವುದು ಉತ್ತಮವೆಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ವಿವರಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೆಕ್ಷನ್ (9) (ಬ) ನಲ್ಲಿ :

> "Where a person makes an application to the Commissioner in the prescribed form for any information relating to any assessee in respect of any assessment made under this Act, the Commissioner may, if he is satisfied that it is in the public interest so to do, furnish or cause to be furnished the information asked for in respect of that assessment only and his decision in this behalf shall be final and shall not be called in question in any court of law."

ಒಂದು ವಿವಾದ ನಡೆಯತಕ್ಕ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಹೋಗಿ ಅಲ್ಲಿ ನ್ಯಾಯದೊರೆಕಿಸಿಕೊಳ್ಳುವ ಹಕ್ಕು ಎಲ್ಲಾ ಜನರಿಗೂ ಇರುತ್ತದೆ. ಹಾಗಿರುವಾಗ ಈ ಕಲಂನಲ್ಲಿ ಇವರು ಕೊಡತಕ್ಕ ತೀರ್ಮಾನವೇ ಕೊನೆಯ ತೀರ್ಮಾನವೆಂದು ಹೇಳತಕ್ಕಂಥ ಇಂಥಾ ಒಂದು ಅಧಿಕಾರವನ್ನು ಈ ಪ್ರಜಾಪ್ರಭುತ್ವದಲ್ಲಿ ಒಬ್ಬ ಅಧಿಕಾರಿಯ ಕೈಗೆ ಕೊಡತಕ್ಕದ್ದು ಸೂಕ್ತವೇ ಎಂದು ಕೇಳುತ್ತೇನೆ. ಇದನ್ನು ತಾವೆಲ್ಲರೂ ಪರಿಶೀಲನೆ ಮಾಡಬೇಕಾಗಿದೆ.

ಇನ್ನು ಈ ಸಭೆಯ ಮುಂದೆ ರೂಲ್ಸುಗಳನ್ನು ಇಡುವ ಬಗ್ಗೆ ಇದರಲ್ಲಿ ಎಲ್ಲ ಕಾನೂನುಗಳಲ್ಲಿ ಹೇಳುವಂತೆ ಇದರಲ್ಲೂ ಹೇಳಲಾಗಿದೆ. ಇದೇನೋ ಕೆಲವು ವೇಳೆ ಸರಿಯಾಗಿರುತ್ತದೆ. ಆದರೆ ಕೆಲವು ವೇಳೆ ರೂಲ್ಸುಗಳನ್ನು ಮಾಡುವಾಗ ಅವು ಸರಿಯಾಗಿ ಇರುವುದಿಲ್ಲ. ಇದರಿಂದ ನಾನು ಸರಕಾರಕ್ಕೆ ಸಲಹೆ ಮಾಡುವುದು ಕೆಲವು ಮುಖ್ಯವಾದ ರೂಲ್ಸುಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಮುನ್ನ ತಂದು ಇಲ್ಲೆ ಚರ್ಚೆ ಮಾಡಿ ಅದರ ಸಾಧಕ ಭಾಧಕಗಳನ್ನು ನೋಡಿಕೊಂಡು ಅದನ್ನು ಮಾಡಿದರೆ ಸರಿಯಾಗಿರುತ್ತದೆ. ಇನ್ನು ಮುಂದೆ ಸರಕಾರದವರು ಇಂತಹ ರೂಲ್ಸುಗಳನ್ನು ಇಲ್ಲೆ ಇಡುವುದಕ್ಕೆ ಮುನ್ನ ಚರ್ಚೆ ಮಾಡಲು ಒಂದು ಅವಕಾಶ ಕಲ್ಪಿಸಿಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ. ಏಕೆಂದರೆ, ಕೆಲವು ರೂಲ್ಸುಗಳು ಸರಿಯಾಗಿಲ್ಲ ಎನ್ನುವ ಕಾರಣದಿಂದ ಈಚೆಗೆ ಸರಕಾರದಿಂದ ಕೆಲವು ಸುಗ್ರೀವಾಜ್ಞೆಗಳು ಬರಲು ಕಾರಣವಾಗಿವೆ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಇಲ್ಲೆ ರೂಲ್ಸುಗಳನ್ನು ಸರಿಯಾಗಿ ಚರ್ಚೆ ಮಾಡಿ ಅನಂತರ ಮಾಡುವುದು ಸರಿಯಾಗಿರುತ್ತದೆ. ಮುಂದೆ ಜನಗಳಿಗೆ ಕಷ್ಟಗಳು ಬರುವುದು ತಪ್ಪುತ್ತದೆ. ಅದರಲ್ಲೂ ಮುಖ್ಯ ಮುಖ್ಯವಾದ ರೂಲ್ಸುಗಳನ್ನು ಇಲ್ಲಿ ಲೇ ಮಾಡುವುದಕ್ಕೆ ಮೊದಲೇ ಇಲ್ಲಿ ಒಂದು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಇದರಲ್ಲಿರುವ Statement of Objects and Reasons ನಲ್ಲಿ :

"This occasion is also utilised to make certain minor amendments relating to procedural matters and also to provide for concessional rate of tax for *vermicelli* and to reduce the rate of tax on sugarcane and to exempt Amber Charkas, Druggets, Dutries and Carpets. The benefit of exemption granted to *bona fide* producers under item 28 of the V Schedule is proposed to be limited to persons who produce goods exclusively coming under village industry."

(ಶ್ರೀ ಟಿ. ಆರ್. ಶಾಮಣ್ಣ)

ಎಂದು ಹೇಳಲಾಗಿದೆ. ಬಡವರಿಗೆ ಮುಖ್ಯವಾಗಿ ಬೇಕಾಗಿರುವ ನವಣೆ, ಸಜ್ಜೆ ಇವುಗಳಿಗೆ ಸರಕಾರ ವಿನಾಯತಿ ಕೊಟ್ಟಿದ್ದರೆ ಇಂತಹ ಬಡ ಜನಗಳಿಗೆ ಉಪಕಾರವಾಗುತ್ತಿತ್ತು. ಇವೊತ್ತಿನ ದಿವಸ ಎಷ್ಟು ಜನ ಶ್ಯಾವಿಗೆ ಮಾಡಿಕೊಂಡು ಉಪಯೋಗಿಸುತ್ತಿದ್ದಾರೆ ಎನ್ನುವುದು ನಮಗೆ ಹೆಚ್ಚಾಗಿ ಸಿಗುತ್ತಿಲ್ಲ. ಇಂತಹವರಿಗೆ ಎಕ್ಸಂಪ್ಷನ್ ಎಂದು ಕೊಡುವುದಕ್ಕೆ ಬದಲಾಗಿ ಬಡಜನರು ಉಪಯೋಗಿಸುವ ಆಹಾರ ಪದಾರ್ಥಗಳಿಗೆ ವಿನಾಯತಿ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಇದರ ಜೊತೆಗೆ ಇದರಲ್ಲಿ 'ಡ್ರಗೆಟ್ಸ್'ಗೆ ವಿನಾಯತಿ ಕೊಟ್ಟಿದ್ದಾರೆ. ಸಂತೋಷ. ಆದರೆ ಚರಕಾಕ್ಕೆ ವಿನಾಯತಿ ಕೊಡಬೇಕೆಂದು ಮಾಡಿದ್ದಾರೆ. ಈಗಾಗಲೇ ಖಾದಿ ಬೋರ್ಡಿನ ಮೂಲಕ ಮಾಡಿಸಿದ ಚರಕಗಳೇ ಕೆಲಸ ಮಾಡದೇ ಮೂಲೆಗೆ ಬಿದ್ದಿವೆ. ಅದನ್ನು ಯಾರೂ ಉಪಯೋಗ ಮಾಡದೇ ಹೊರಕ್ಕೆ ಬಿಸಾಡಿದ್ದಾರೆ ಮತ್ತು ಬಿಸಿಲಿನಲ್ಲಿ ಒಣಗಿ ಹಾಳಾಗುತ್ತಲಿದೆ. ಇಂತಹುದಕ್ಕೆ ಎಕ್ಸೆಂಪ್ಷನ್ ಎಂದು ಕೊಟ್ಟರೆ ಇದಕ್ಕಾಗಿ ಸರಕಾರ ಗ್ರಾಂಟು ಕೊಟ್ಟಿರುವುದು ಅನುಪಯೋಗವಾಗಲಲ್ಲವೇ! ಇದಕ್ಕಾಗಿ ಸರ್ಕಾರ ಸಾರ್ವಜನಿಕರ ಹಣ ಕೊಟ್ಟು ಅದು ಪೋರಾಗುತ್ತಿರುವುದು ಅವರ ಗಮನಕ್ಕೆ ಬರುತ್ತಿಲ್ಲವೇ? ಇಂತಹವುಗಳಿಗೆ ಎಕ್ಸೆಂಪ್ಷನ್ ಎಂದು ಕೊಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಎಕ್ಸೆಂಪ್ಷನ್‌ಗಳನ್ನು ಕೊಡುವಾಗ ಬಡವರು ಉಪಯೋಗಿಸುವಂತಹ ಆಹಾರ ಪದಾರ್ಥಗಳಿಗೆ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತದೆ. ಆದುದರಿಂದ ಇಂತಹ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ತಿದ್ದುಪಡಿ ಮಾಡಿ ಈ ರೀತಿ ತರುವುದು ತೃಪ್ತಿಕರವಾಗಿಲ್ಲ ಏಕೆಂದರೆ, ಮೊದಲನೆಯದಾಗಿ, ಆಹಾರ ಸಾಮಗ್ರಿಗಳಮೇಲೆ ನ್ಯಾಯವಾಗಿ ವಿನಾಯತಿಗಳನ್ನು ಕೊಡಬೇಕು ಅಲ್ಲದೆ ನಾನು ಆಗಲೇ ಹೇಳಿದ ಹಾಗೆ ಸೇಲ್ಸ್ ಟ್ಯಾಕ್ಸನ್ನು ಹಾಕುವಾಗ ಸಮಗ್ರವಾಗಿ ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಹಾಕಬೇಕು. ಇದರಲ್ಲಿ ಹೇಳಿರುವಂತೆ ಯದ್ವಾತದ್ವಾ ಹಾಕಿ ತಿದ್ದುಪಡಿ ಮಾಡುವುದು ತೃಪ್ತಿಕರವಾಗಿ ಕಾಣುವುದಿಲ್ಲ. ಎರಡನೆಯದಾಗಿ ಇದರಲ್ಲಿ ಕೆಲವು ಹೊಸ ಇಂಡಸ್ಟ್ರಿಗಳಿಗಾಗಿ ವಿನಾಯತಿ ಕೊಟ್ಟಿದ್ದಾರೆ. ಹೊಸದಾಗಿ ಇಂಡಸ್ಟ್ರಿಗಳಿಗೆ ಉತ್ತೇಜನ ಕೊಡಬೇಕೆಂದು ಮಾಡಿರುವುದೇನೋ ನಿಜ. ಆದರೆ ಇರುವ ಹಳೆಯ ಇಂಡಸ್ಟ್ರಿಗಳೇ ಹೋಗುತ್ತಿರುವಾಗ ಅವನ್ನು ಪುನಃ ಜೀವಂತವಾಗಿ ಮಾಡಲು ಕೆಲವು ವಿನಾಯತಿಗಳನ್ನು ಸರಕಾರ ಕೊಡುವುದು ಉತ್ತಮ. ಆದರಿಂದ ಹಳೇ ಇಂಡಸ್ಟ್ರಿಗಳೂ ಕೂಡ ಬದುಕುತ್ತವೆ. ನಷ್ಟಕ್ಕೆ ಒಳಗಾಗಿರುವ ಇಂಡಸ್ಟ್ರಿಗಳಿಗೆ ಸಹಾಯ ಮಾಡಲು ಇಂತಹ ವಿನಾಯತಿಗಳನ್ನು ಕೊಡುವುದು ಸರಿಯಾಗಿರುತ್ತದೆ ಮತ್ತು ಅವು ಬದುಕಲು ಒಂದು ಮಾರ್ಗ ಕಲ್ಪಿಸಿಕೊಟ್ಟಂತಾಗುತ್ತದೆ. ಇಲ್ಲದೇ ಇದ್ದರೆ ಹಳೆಯ ಇಂಡಸ್ಟ್ರಿಗಳಿಗೂ ತೊಂದರೆಯಾಗುತ್ತದೆ ಮತ್ತು ಇಲ್ಲಿರುವ ಕೆಲಸಗಾರರುಗಳಿಗೂ ಕಷ್ಟವಾಗುತ್ತದೆ. ಹೊಸ ಇಂಡಸ್ಟ್ರಿಗಳಿಗೆ ಉತ್ತೇಜನ ಕೊಟ್ಟು ಪ್ರೋತ್ಸಾಹ ಮಾಡುವಂತೆ ಹಳೆ ಇಂಡಸ್ಟ್ರಿಗಳಿಗೂ ಉತ್ತೇಜನ ಕೊಡುವುದು ಒಳ್ಳೆಯದು. ಪೇಟ್ರನೇಜು ಕೈಗಾರಿಕೆಗಳಿಗೆ ಕೊಡುವುದೇನೋ ನಿಜ. ಇದರಿಂದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅನುಕೂಲವಾಗುತ್ತದೆ ಮತ್ತು ಅವುಗಳು ತಮ್ಮ ಆದಾಯವನ್ನೂ ಸರಿದೂಗಿಸಿಕೊಳ್ಳಲು ಸಹಾಯವಾಗುತ್ತದೆ. ಇದರ ಜೊತೆಯಲ್ಲಿ ಮೊದಲಿನಿಂದ ಇರುವ ಹಳೇ ಇಂಡಸ್ಟ್ರಿಗಳಿಗೂ ಅನುಕೂಲವಾಗುವಂತೆ ಸಹಾಯ ಮಾಡುವುದು ಅವಶ್ಯಕ.

ಕೊನೆಯದಾಗಿ, ನಾನಾಗಲೇ ಹೇಳಿದಂತೆ ಈಗ ಪ್ರೊಹಿಬಿಷನನ್ನು ಕತ್ತು ಹಾಕಿದ್ದಾರೆ. ಇದರಿಂದ ಸರಕಾರಕ್ಕೆ ಹೆಚ್ಚು ಉತ್ಪತ್ತಿ ಬರುತ್ತದೆ. ಜನರು ಉಪಯೋಗಿಸುವ ಆಹಾರ ಪದಾರ್ಥಗಳ ಬೆಲೆ ದಿನೇ ದಿನೇ ಏರುತ್ತಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಆಹಾರ ಧಾನ್ಯಗಳಿಗೆ ವಿನಾಯತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಕೆಲವು ತಿದ್ದುಪಡಿಗಳನ್ನೂ ಕಳುಹಿಸಿದ್ದೇನೆ. ಆ ತಿದ್ದುಪಡಿಗಳನ್ನು ಸರಕಾರದವರೂ ಒಪ್ಪುತ್ತಾರೆ ಎಂದು ಭಾವಿಸಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**Mr. CHAIRMAN.**—I call upon Sri Rajaiah Setty to speak. But before he commences, I want to bring to the notice of hon. Members that it has been decided by the Business Advisory Committee, held at 3 p.m. today, that this Bill should be finished even though it involves our sitting a little longer.

**Sri P. V. AITHAL.**—It may have to be continued tomorrow.

Mr. CHAIRMAN.—It has to be finished today because tomorrow the very important question of Mahajan Commission Report is coming up and it has to be debated for two or three days. I am sure intelligent members like Sri Aithal, Sri Rajaiah Shetty and Sri K.H. Patil have the capacity to compress all that they want to say within a few words and within a short time. If they avoid repetition, much time can be saved.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಮಂತ್ರಿಗಳು ವಿದೇಶ ಪ್ರಯಾಣ ಮಾಡಿ ಬಂದ ಮೇಲೆ ಸಾಮಾನ್ಯವಾಗಿ ಹೊರದೇಶಗಳಲ್ಲಿ ಯಾವ ರೀತಿಯಾದ ಟ್ಯಾಕ್ಸೇಷನ್ ಸ್ಟ್ರಕ್ಚರ್ ಇದೆ ಎನ್ನುವುದನ್ನು ನೋಡಿಕೊಂಡು ಅದೇ ನೀತಿಯನ್ನು ಇಲ್ಲಿಯೂ ಉಪಯೋಗಿಸಿಕೊಂಡು ಹೋಗಬೇಕು ಎನ್ನುವ ಮನೋಭಾವನೆಯಿಂದ ಇಲ್ಲ ಇಂತಹದೆಲ್ಲವನ್ನು ತಂದಿದ್ದಾರೆಂದು ತೋರುತ್ತದೆ. ಅವರು ಪರದೇಶಕ್ಕೆ ಹೋಗಿ ಅನುಭವವನ್ನು ಪಡೆದು ಬರಲಿ, ಬೇಡ ಎಂದು ನಾನು ಹೇಳುತ್ತಿಲ್ಲ. ನನಗಾದರೂ ಅನಿಸುವುದು ಅದೇರೀತಿಯಾಗಿ ಇಲ್ಲ ಮಾಡಬೇಕೆಂದರೆ, ಅದು ಇಲ್ಲಿಗೆ ಸರಿಹೊಂದುವುದಿಲ್ಲ. ನಿಜವಾಗಿಯೂ ಅವರ ಉದ್ದೇಶ ಸಾಧುವಾಗಿದ್ದರೂ ಅದು ಇಲ್ಲಿ ಕಾರ್ಯರೂಪಕ್ಕೆ ತರುವುದು ಕಷ್ಟವಾಗುತ್ತದೆ. ಈಗ ಈ ಬಿಲ್ಲಿನಲ್ಲಿ ತಿದ್ದುಪಡಿಯನ್ನು ಯಾವ ದೃಷ್ಟಿಯಿಂದ ತಂದಿದ್ದಾರೆ ಎನ್ನುವುದನ್ನು ಸ್ವಲ್ಪ ವಿಚಾರ ಮಾಡೋಣ. ಸರಕಾರಕ್ಕೆ ಸುಮಾರು 50 ಲಕ್ಷ ರೂಪಾಯಿಗಳಷ್ಟು ಆದಾಯ ಜಾಸ್ತಿ ಬರುತ್ತದೆ ಎಂದು ಇದರಲ್ಲಿ ಹೇಳುತ್ತಿದ್ದಾರೆ ಹಾಗೂ ಇದರಲ್ಲಿ ಕೆಲವು ಐಟಂಗಳಿಗೆ ರಿಯಾಯಿತಿ ತೋರಿಸಬೇಕು ಎಂದು ಹೇಳುತ್ತಿದ್ದಾರೆ. ಇದರಲ್ಲಿ ಕಬ್ಬಿನ ವಿಚಾರವಾಗಿ ಹೇಳುತ್ತಿದ್ದಾರೆ. ಕಬ್ಬನ್ನು ಹೆಚ್ಚಾಗಿ ಬೆಳೆದು ಸಕ್ಕರೆ ಕಾರ್ಖಾನೆಗೆ ಕೊಡಲಿ ಎಂದು ಮತ್ತು ಕಬ್ಬು ಬೆಳೆಯುವವರಿಗೆ ಉಪಕಾರವಾಗಲಿ ಎಂದು ಇದರ ರೇಟನ್ನು ಜಾಸ್ತಿಮಾಡಿದರು ಮತ್ತ ಇದರಿಂದ ಉತ್ಪತ್ತಿಯೂ ಜಾಸ್ತಿಯಾಗಿ ಬರುತ್ತದೆ ಎಂದು ಮಾಡಿದ್ದು. ಇದನ್ನು ಶೇಕಡಾ 15 ರಷ್ಟು ಎಂದು ಮೊದಲಿದ್ದುದಕ್ಕೆ ಶೇಕಡಾ ಹತ್ತರಷ್ಟು ಎಂದು ಇಳಿಸಿದರು. ಇದರಂತೆ ಹಿಂದೆ ಕಬ್ಬಿಗೆ ಒಂದು ಟನ್ನಿಗೆ 45 ರೂಪಾಯಿಗಳು ಇತ್ತು. ಇವೊತ್ತಿನ ದಿವಸ ಫ್ಯಾಕ್ಟರಿಯವರು ಕಬ್ಬಿಗೆ ಹೆಚ್ಚು ಬೆಲೆ ಕೊಡಲೇ ಬೇಕು ಎಂದು ಮಾಡಿದ್ದಾರೆ. ಇದರಂತೆ ಈಗ ಕಬ್ಬಿಗೆ ಒಂದು ಟನ್ನಿಗೆ 110 ರೂಪಾಯಿಗಳಾಗುತ್ತದೆ. ಇದರಿಂದ ಹಿಂದೆ ಶೇಕಡಾ 15 ರಷ್ಟು ಎಂದು ಇದ್ದ ಟ್ಯಾಕ್ಸ್‌ನ್ನು ಶೇಕಡದ ಹತ್ತಕ್ಕೆ ಇಳಿಸಿದುದರಿಂದ ಮೊದಲು ಏಳು ರೂಪಾಯಿ ಕೊಡುತ್ತಿದ್ದರು. ಈಗ ಕಬ್ಬಿನ ಬೆಲೆಯನ್ನು ಟನ್ನಿಗೆ 110 ರೂಪಾಯಿಗಳಂತೆ ನಿಗದಿ ಮಾಡಿದುದರಿಂದ ಟ್ಯಾಕ್ಸ್ ರೂಪದಲ್ಲಿ 14 ರೂಪಾಯಿಗಳಷ್ಟು ಕೊಡಬೇಕಾಗಿದೆ. ಇದರಿಂದ ಸಕ್ಕರೆ ಬೆಲೆಯೂ ಏರುತ್ತಿದೆ. ಇದರಿಂದ ಸರಕಾರ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿದು ಮೊದಲು ಮಾಡಿರುವುದನ್ನು ಪುನಃ ಈಗ ಜಾಸ್ತಿ ಮಾಡಿ ತೆರಿಗೆ ಹೊರಿಸುವುದು ಸರಿಯಿಲ್ಲ. ಇದನ್ನು ಸರಕಾರ ತಿರ್ವುಗಾಗಿ ಗಮನ ಕೊಟ್ಟು ಯೋಚನೆ ಮಾಡಬೇಕು. ಇನ್ನು ಫಿನಿಷ್ಡ್ ಗುಡ್ಸ್ ಬಗ್ಗೆ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತಾ ಹೊಸದಾಗಿ ಯಾವುದಾದರೂ ಕೈಗಾರಿಕೆ ಆರಂಭ ಮಾಡುವವರು ಇದ್ದರೆ ಅಂತಹವರಿಗೆ ಎಕ್ಸೆಂಪ್ಷನ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲೇ ಎಷ್ಟೋ ಜನರು ಇಂಡಸ್ಟ್ರಿಗಳನ್ನು ಆರಂಭ ಮಾಡಿ ಎಷ್ಟೋ ಪನ್ತುಗಳನ್ನು ತಯಾರು ಮಾಡುತ್ತಿದ್ದಾರೆ. ಇಂತಹವರುಗಳಿಗೆ ಉತ್ತೇಜನ ಕೊಡಬೇಕಾಗಿದ್ದರೆ ಇವರಿಗೂ ಟ್ಯಾಕ್ಸ್‌ಗಳ ವಿನಾಯಿತಿ ಕೊಡಬೇಕು. ಇಲ್ಲದೇ ಇದ್ದರೆ ಇದರಿಂದ ಉಪಯೋಗವಾಗುವುದಿಲ್ಲ. ಹೀಗೆ ಮಾಡದೇ ಹೋದರೆ ಸರಕಾರ್ಯಾವ ಉದ್ದೇಶದಿಂದ ಕೈಗಾರಿಕೆಯನ್ನು ಮಾಡಬೇಕೆಂದು ಸಹಾಯ ಮಾಡಿದರೋ ಅದರ ಉದ್ದೇಶ ವಿಫಲವಾಗುತ್ತದೆ. ಇಂತಹ ಕೈಗಾರಿಕೆಗಳಿಗೆ ವಿನಾಯಿತಿ ಕೊಡುವುದು ಬಹು ಮುಖ್ಯ ಎಂದು ನಾನು ಇಲ್ಲಿ ಹೇಳಬೇಕಾಗಿದೆ.

5-30 P.M.

ಇವೊತ್ತಿನ ದಿವಸ ನಾವು ಒಂದು ವಿಷಯವನ್ನು ಯೋಚನೆ ಮಾಡೋಣ. ನಮಗೆ ಮೊದಲು ಫ್ಯಾಕ್ಟರಿಯಲ್ಲಿ ಒಂದು ಸಾವಿರ ರೂಪಾಯಿಗಳಿಗೆ ಒಂದು ಟನ್ ಸಕ್ಕರೆ ಸಿಕ್ಕುತಿತ್ತು. ಆದು ಇವೊತ್ತಿನ ದಿವಸ ಪ್ರಪಂಚದ ಓಪನ್ ಮಾರ್ಕೆಟ್ಟಿನಲ್ಲಿ ಒಂದು ಕ್ವಿಂಟಾಲಿಗೆ 450 ರೂಪಾಯಿಗಳಂತೆ ವ್ಯಾಪಾರ ವಾಗುತ್ತಿದೆ. ಫ್ರತಕ್ಕೋಸ್ಕರ ಹೀಗಾಗಿದೆ, ಕಂಟ್ರೋಲ್ ದರದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ ಎಲ್ಲರಿಗೂ ಸಿಕ್ಕುತ್ತಿತ್ತು. ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಕೊಂಡು ದೇಶದ ಜನ ಕೊಂಡು ತಿನ್ನಬೇಕು. ಈ ಆಹಾರ ಧಾನ್ಯಗಳು ಜಾಸ್ತಿ ಆಗುವುದಕ್ಕೆ ಎರಡು ಕಾರಣಗಳಿವೆ. ಒಂದು ತೆರಿಗೆಯನ್ನು ಹಾಕುವ ವಿಧಾನ. ಎರಡನೆಯದು ಕಳ್ಳ ನೋಟನ್ನು ಪ್ರಿಂಟ್ ಮಾಡುವುದು ಇದರಲ್ಲಿ ಒಂದನೆಯದು ಕಳ್ಳ ನೋಟುಗಳನ್ನು ಪ್ರಿಂಟ್ ಮಾಡಿ ವ್ಯಾಪಾರ ಮಾಡುತ್ತಾ ಇರುವುದರಿಂದ 1947ನೇ ಇಸವಿಯಲ್ಲಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರಿಜರ್ವ್ ಬ್ಯಾಂಕಿನಲ್ಲಿ 200 ಕೋಟಿ ರೂಪಾಯಿಗಳ ಚಲಾವಣೆ ಇತ್ತು, ಅದು ಇವೊತ್ತು 4,820 ಕೋಟಿ ರೂಪಾಯಿಗಳ ಚಲಾವಣೆಯಲ್ಲಿದೆ. ಹಣಕ್ಕೆ ಸರಿಯಾಗಿ ಪದಾರ್ಥಗಳು ಹೆಚ್ಚಿಗೆ ಬರುತ್ತಿಲ್ಲ. ಯೋಜನೆಯ ಹೆಸರಿನಲ್ಲಿ ಹಣವನ್ನು ಜಾಸ್ತಿ ಮಾಡುತ್ತಿದ್ದಾರೆ. ಪದಾರ್ಥಗಳು ಇದ್ದಷ್ಟೇ ಇವೆ. ಪದಾರ್ಥಗಳು ನೂರಕ್ಕೆ 50ರಷ್ಟು ಜಾಸ್ತಿ ಆಗಿರಬಹುದು. ಆದರೆ ಹಣ ಒಂದಕ್ಕೆ 20ರಷ್ಟು 30ರಷ್ಟು ಜಾಸ್ತಿ ಆಗಿದೆ. ಈಗ ಚಲಾವಣೆಯಲ್ಲಿರುವ 4,820 ಕೋಟಿ ರೂಪಾಯಿಗಳಲ್ಲಿ ನಾವು ನೋಡುವ ರೀತಿಯಲ್ಲಿ ಸಾವಿರಾರು ರೂಪಾಯಿಗಳ ಕಳ್ಳ ನೋಟುಗಳು ಮಾರ್ಕೆಟ್ಟಿಗೆ ಬರುತ್ತಿವೆ. ಈ ಕಳ್ಳ ನೋಟಿನ ಪ್ರಮಾಣವನ್ನು ಲೆಕ್ಕ ಹಾಕಿದರೆ ಒಂದಕ್ಕೆ 40ರಷ್ಟು ಜಾಸ್ತಿ ಆಗಿದೆ. ಜನ ಸಂಖ್ಯೆಯೂ ಜಾಸ್ತಿ ಆಗಿದೆ. ಪದಾರ್ಥಗಳ ಉತ್ಪತ್ತಿಯೇನೂ ಕಡಿಮೆ ಇಲ್ಲ. ಕಳ್ಳ ನೋಟನ್ನು ಪ್ರಿಂಟ್ ಮಾಡುತ್ತಿರುವುದು, ಮತ್ತು ಸರ್ಕಾರ ದವರು ತೆರಿಗೆಯನ್ನು ಜಾಸ್ತಿ ಮಾಡುತ್ತಿರುವುದು ಈ ಎರಡು ಕಾರಣಗಳಿಂದ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಿದೆ. ಇವೊತ್ತಿನ ದಿವಸ ಜಪಾನಿನಲ್ಲಿ ಮತ್ತು ಜರ್ಮನಿಯಲ್ಲಿ ಸಾಮಾನ್ಯವಾಗಿ ಸೆಮಿಫಿನಿಷ್ಡ್ ಗುಡ್ಸಿಗೆ ತೆರಿಗೆಯನ್ನು ಹಾಕುವುದಿಲ್ಲ. ಯಂತ್ರಗಳಿಗೆ ಉಪಯೋಗಿಸುವ ಇಂಧನಕ್ಕೆ ತೆರಿಗೆ ಹಾಕುವುದಿಲ್ಲ. ಇಲ್ಲಿ ವಸ್ತುಗಳನ್ನು ತಯಾರು ಮಾಡತಕ್ಕ ಯಂತ್ರಗಳಿಗೆ ತೆರಿಗೆಯನ್ನು ಹಾಕಿ, ಉತ್ಪತ್ತಿಯಾದ ವಸ್ತುಗಳಿಗೂ ತೆರಿಗೆಯನ್ನು ಹಾಕುತ್ತಿದ್ದಾರೆ. ವಿದೇಶ ವಿನಿಮಯದ ವ್ಯಾಪಾರಕ್ಕೋಸ್ಕರ ಎಲ್ಲರಿಗೂ ತೆರಿಗೆಯನ್ನು ಹಾಕುತ್ತಿದ್ದಾರೆ ಇವೊತ್ತಿನ ದಿವಸ ತೆರಿಗೆಯ ನೀತಿಯಿಂದ ಯೋಜನೆ ಗಳು ಹಾಳಾಗಿವೆ, ಕೈಗಾರಿಕೆಗಳು ನಾಶವಾಗಿವೆ, ವ್ಯಾಪಾರ ಕುಂಠಿತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ಮುಂದೆ ಯೋಜನೆ ಸರಿಯಾಗಿ ನಡೆಯಬೇಕಾದರೆ ಈ ಮೂರು ಗೊಂದಲಗಳು ಏನಿದೆಯೋ ಅವುಗಳನ್ನು ಸರಿಪಡಿಸದಿದ್ದರೆ ಯೋಜನೆ ವ್ಯರ್ಥವಾಗುತ್ತದೆ ಎಂದು ಘಂಟಾ ಘೋಷವಾಗಿ ಹೇಳ ಬಯ ಸುತ್ತೇನೆ.

ಇಪ್ಪತ್ತು ವರ್ಷಗಳ ಕಾಂಗ್ರೆಸ್ಸಿನವರ ಆಡಳಿತಾನಂತರ ಇವೊತ್ತಿನ ದಿವಸ ಆಹಾರ ಪದಾರ್ಥಕ್ಕೂ ಹೆಚ್ಚಿನ ತೆರಿಗೆಯನ್ನು ಹಾಕಿ ಬೆಲೆ ಜಾಸ್ತಿ ಜಾಸ್ತಿಯಾಗುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಆಹಾರವಸ್ತುಗಳು ಮತ್ತು ಅಗತ್ಯವಸ್ತುಗಳಿಗೆ 1½ ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಒಂದು ಕೈಯ್ಯಿಂದ ಇನ್ನೊಂದು ಕೈಗೆ ಬದಲಾವಣೆ ಆದಾಗೆಲ್ಲ 1½ ಪರ್ಸೆಂಟ್ ತೆರಿಗೆ ಯನ್ನು ಕೊಡಬೇಕಾಗುತ್ತದೆ ಹೀಗೆ ನಾಲ್ಕು ಜನಗಳಿಂದ ಬದಲಾವಣೆ ಆದರೆ 100ಕ್ಕೆ 6 ರೂಪಾಯಿ ಜಾಸ್ತಿ ಆಗುತ್ತದೆ. ಅದರ ಜೊತೆಗೆ ವರ್ತಕರ ಲೆವಿ ಕೊಡಬೇಕು. ಅದು ಒಂದು ಪಲ್ಲ ರಾಗಿಗೆ 3 ರೂಪಾಯಿ ಜಾಸ್ತಿ ಆಗುತ್ತದೆ ಒಂದು ಪಲ್ಲ ಅಕ್ಕಿಗೆ 6 ರೂಪಾಯಿ ಜಾಸ್ತಿ ಆಗುತ್ತದೆ ಒಟ್ಟಿನಲ್ಲಿ 16 ರೂಪಾಯಿಗಳನ್ನು ಬರೀ ತೆರಿಗೆಯ ರೂಪದಲ್ಲಿ ಜಾಸ್ತಿ ಮಾಡಿದ್ದಾರೆ. ನಿಜವಾಗಿಯೂ ಕೂಡ ಆಹಾರ ಪದಾರ್ಥಗಳ ಮತ್ತು ಅಗತ್ಯವಸ್ತುಗಳ ಜನ ಸಾಮಾನ್ಯರು ಉಪಯೋಗಿಸುವ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕು. ಈಗ ಶ್ಯಾವಿಗೆ ಮೇಲೆ ಹಾಕಿದ್ದಂತಹ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಇದು ಮಂತ್ರಿಗಳ ಆಹಾರ. ಇದರಿಂದ ಬಡವರಿಗೆ ಏನೂ ಉಪಯೋಗವಿಲ್ಲ.

ಇನ್ನು ಈ ಮನೂವೆಯ ನಾಲ್ಕನೇ ಷೆಡ್ಯೂರ್‌ನಲ್ಲಿರತಕ್ಕ ವಸ್ತುಗಳಿಗೆ ತೆರಿಗೆಯನ್ನು ಜಾಸ್ತಿ ಮಾಡತಕ್ಕಂಥ ಆಕ್ಟ್ ಪಾರ್ಲಮೆಂಟಿನಲ್ಲಿ ಪಾಸಾಗಿದೆ. ಅದಕ್ಕೋಸ್ಕರ ಕೊಳ್ಳುವ ವಸ್ತುಗಳಿಗೆ ನಾವು ತೆರಿಗೆಯನ್ನು ಜಾಸ್ತಿ ಹಾಕುತ್ತಿದ್ದೇವೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ನಮ್ಮ ಸರ್ಕಾರದ ಮೇಲೆ ಇವೊತ್ತಿನ ದಿವಸ ಯಾರನ್ನಿಗೆ ಜಾಸ್ತಿ ತೆರಿಗೆಯನ್ನು ಹಾಕುತ್ತಿದ್ದಾರೆ. ಅದರ ಪರಿಣಾಮ ಯಾವುದರಮೇಲೆ ಉಂಟಾಗುತ್ತದೆ ಎಂಬುದು ಸರ್ಕಾರದವರಿಗೆ ಗೊತ್ತಿದೆ. ಈ ಯಾರನ್‌ಗೆ ಹೆಚ್ಚಿನ ತೆರಿಗೆಯನ್ನು ಹಾಕುವುದರಿಂದ ಕೈಗಾರಿಕೆ ಹಾಳಾಗಿ ಹೋಗಿದೆ. ಇದರ ಜೊತೆಗೆ ತಮಗೆ ಗೊತ್ತಿರಬಹುದು ಬೆಂಗಳೂರಿನಲ್ಲಿ ನೂರಾರು ಫೌಂಡ್ರಿಗಳು ಇವೆ. ಈಗ ಎರ್ನಾ ಕಚ್ಚಾಮಾಲುಗಳ ಮೇಲೂ ತೆರಿಗೆಯನ್ನು ಜಾಸ್ತಿ ಹಾಕಿದ್ದಾರೆ ಕಬ್ಬಿಣ ಮತ್ತು ಕಲ್ಲಿದ್ದಲ ಬೆಲೆ ಜಾಸ್ತಿ ಆಗಿದೆ. ಕಳೆದ 5 ವರ್ಷಗಳಿಂದ ಕೇಂದ್ರ ಸರ್ಕಾರ ಈ ವಸ್ತುಗಳ ಮೇಲಿನ ತೆರಿಗೆಯನ್ನು ಮೂರು ಸಾರಿ ರಿವೈಜ್ ಮಾಡಿದ್ದಾರೆ. ಈಗ ಮತ್ತೆ ಅವುಗಳಿಗೆ ತೆರಿಗೆಯನ್ನು ಜಾಸ್ತಿ ಮಾಡ ಬೇಕೆಂದಿದ್ದಾರೆ. ಫೌಂಡ್ರಿ ನೋಡಿದರೆ ಕೂಲಿಗಾರರು ಕೆಲಸ ಇಲ್ಲದೆ ಸಾಯುತ್ತಿದ್ದಾರೆ ಫೌಂಡ್ರಿ ಮಾಲೀಕರು ಬಾಗಿಲುಗಳನ್ನು ಮುಚ್ಚಿಕೊಂಡಿದ್ದಾರೆ. ಇಂಥಾ ಸಮಯದಲ್ಲಿ ಕೋಲ್ ಮತ್ತು ಕೋಕ್‌ಗೆ ತೆರಿಗೆಯನ್ನ ಜಾಸ್ತಿ ಮಾಡಿರುವುದು ಮತ್ತು ಯಾರನ್ನಿಗೆ ತೆರಿಗೆಯನ್ನ ಜಾಸ್ತಿ ಮಾಡಿರು

ವುದು ಸರಿಯಲ್ಲ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಚಿಕ್ಸ್‌ಜ್ಯೆರ್ ಮಿಲ್ಲುಗಳ ಕೈಗಾರಿಕೆಗಳು ಫೈಲ್ಯೂರ್ ಆಗಿವೆ. ಈಗ ಅಹಮದಾಬಾದಿನಲ್ಲಿ ಅನೇಕ ಮಿಲ್ಲುಗಳನ್ನು ಮುಚ್ಚಿದ್ದಾರೆ. ಏತಕ್ಕೆಂದರೆ, ತಯಾರಾಗತಕ್ಕಂಥ ಬಟ್ಟೆ ಪ್ರಪಂಚದ ಮಾರ್ಕೆಟ್ಟಿನಲ್ಲಿ ವ್ಯಾಪಾರ ಆಗುತ್ತಿಲ್ಲ ಇವರು ಈತರಹ ಈ ತೆರಿಗೆಯನ್ನು ಹಾಕಿ ದಿನೇ ದಿನೇ ಬೆಲೆಗಳನ್ನು ಜಾಸ್ತಿ ಮಾಡಿಕೊಂಡು ಹೋದರೆ ಖಂಡಿತವಾಗಿಯೂ ಕೂಡ ಕೈಗಾರಿಕೆಗೆ ಯಾವ ಪ್ರೋತ್ಸಾಹವೂ ಸಿಕ್ಕುವುದಿಲ್ಲ ಎಂದು ನಾನು ಹೇಳ ಬೇಕಾಗಿದೆ.

ಈಗ ರಷ್ಯಾ ದೇಶದಲ್ಲಿ ಯೋಜನೆ ಯಾವ ರೀತಿಯಲ್ಲಿ ನಡೆದಿದೆ ಎಂಬುದನ್ನು ನೋಡುವುದಾದರೆ, ಮೊದಲನೆ ಪಂಚವಾರ್ಷಿಕ ಯೋಜನೆಗೆ ಎಷ್ಟು ಹಣವನ್ನು ಹಾಕಿದ್ದರೋ ಆ ಹಣಕ್ಕೆ ಪ್ರತಿ ಫಲ ಕೊಟ್ಟು ಪದಾರ್ಥಗಳ ಉತ್ಪತ್ತಿ ಜಾಸ್ತಿ ಆಗುತ್ತಿದೆ. ಎರಡನೆ ಯೋಜನೆಗೆ ಬಂಡವಾಳ ಹಾಕುವ ಶಕ್ತಿ ಬರುತ್ತಿದೆ. ಆದರೆ ನಮ್ಮಲ್ಲಿ ಏನಾಗುತ್ತಿದೆ ಎಂದರೆ, ಮೊದಲನೆ ಪಂಚವಾರ್ಷಿಕ ಯೋಜನೆ ಕಾರ್ಯಗತ ಆದಮೇಲೆ, ಎರಡನೆ ಪಂಚವಾರ್ಷಿಕ ಯೋಜನೆಗೆ ಮೊದಲನೆ ಪಂಚವಾರ್ಷಿಕ ಯೋಜನೆಗಿಂತ 10 ಸಾವಿರ ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿ ಮೊದಲನೆ ಪಂಚವಾರ್ಷಿಕ ಯೋಜನೆಯ ಸಾಲವನ್ನು ತೀರಿಸುತ್ತಾರೆ. ಹೀಗಾಗಿ ಯೋಜನೆಗಳು ಜಾಸ್ತಿ ಆದಹಾಗೆ ದೇಶದ ಸಾಲವೂ ಜಾಸ್ತಿ ಆಗುತ್ತಿದೆಯೇ ಹೊರತು ಜನ ಸಾಮಾನ್ಯರಿಗೆ ಯೋಜನೆಯ ಪ್ರತಿ ಫಲದೊರಕಿಲ್ಲ. ಜನಗಳ ಜೀವನದ ಮಟ್ಟ ಉತ್ತಮವಾಗಿಲ್ಲ. ಮೊದಲನೇ ಪಂಚವಾರ್ಷಿಕ ಯೋಜನೆಯಿಂದ 4ನೇ ಪಂಚವಾರ್ಷಿಕ ಯೋಜನೆಯವರೆಗೂ ವಸ್ತುಗಳ ಬೆಲೆ ಒಂದು ಯೋಜನೆಯಲ್ಲಿ ಇದ್ದ ಬೆಲೆಗಿಂತ ಇನ್ನೊಂದು ಯೋಜನೆಯಲ್ಲಿ ಜಾಸ್ತಿಯಾಗುತ್ತಾ ಹೋಗುತ್ತಿದೆ ಯೋಜನೆಗಳಿಂದ ಜನ ಸಾಮಾನ್ಯರಿಗೆ ಅಷ್ಟು ಪರಿಣಾಮವನ್ನುಂಟುಮಾಡಿಲ್ಲ. ನಮ್ಮ ದೇಶದ ಜನತೆಯಲ್ಲಿ ಮಧ್ಯಮ ವರ್ಗದವರು, ಮತ್ತು ಬಡವರು ಈ ದೇಶದಲ್ಲಿ ಶೇಕಡಾ 80ರಷ್ಟು ಜನ ಇದ್ದಾರೆ. ಈ ದೇಶದಲ್ಲಿ ಯೋಜನೆಗಳು ಜಾಸ್ತಿಯಾಗಿ ಸರ್ಕಾರದ ಸಾಲ ಜಾಸ್ತಿಯಾಗುತ್ತಿದೆ. ತೆರಿಗೆಯ ಹೊರೆ ಜಾಸ್ತಿಯಾಗಿ ಸರ್ಕಾರದವರು ಯೋಜನೆಗಳಿಗೆ ಹಾಕಿದಂತಹ ಬಂಡವಾಳ ವಿಫಲವಾಗಿರುವುದರಿಂದ ಪದಾರ್ಥಗಳ ಬೆಲೆ ಏರಿದೆ. ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆ ಏರಿದಷ್ಟು ಪ್ರಪಂಚದಲ್ಲಿ ಯಾವ ಭಾಗದಲ್ಲೂ ಏರಿಲ್ಲ. ಮುಖ್ಯವಾಗಿ ನೀತಿಯಿಲ್ಲದ ಹೆಚ್ಚಿನ ತೆರಿಗೆಯನ್ನು ಹಾಕುವ ವಿಧಾನವನ್ನು ಸರಿಪಡಿಸಲು ಸರ್ಕಾರದವರು ಯೋಜನೆ ಮಾಡದಿದ್ದರೆ, ಇದುವರೆಗೆ ಸರ್ಕಾರದವರು ಏನು ಮಾಡಿದ್ದಾರೆ ಅದು ಮತ್ತು ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಹಾಕಿರತಕ್ಕ ಬಂಡವಾಳವೆಲ್ಲಾ ವ್ಯರ್ಥವಾಗುತ್ತದೆ. ಆದ್ದರಿಂದ ಅದು ವ್ಯರ್ಥವಾಗದಂತೆ ತೆರಿಗೆಯನ್ನು ಹಾಕುವ ವಿಧಾನವನ್ನು ಬದಲಾವಣೆ ಮಾಡಬೇಕು. ಇಷ್ಟೇ ಅಲ್ಲ, 3—4 ವಿಚಾರಗಳನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ದಲ್ಲಿ ಕೊಟ್ಟಿದ್ದಾರೆ, ಅಲ್ಲದೆ, ಒಂದನೆಯದಾಗಿ ಕಬ್ಬಿಗೆ ತಾವು ತೋರಿಸುವ ರಿಯಾಯಿತಿ ಬಹಳ ಕಡಿಮೆ ಇದೆ. ಶೇಕಡ 15 ರಿಂದ 10 ರಷ್ಟು ಕಡಿಮೆ ಮಾಡಿದರೂ ಟನ್ ಒಂದಕ್ಕೆ ತಾವು ಜಾಸ್ತಿ ಮಾಡಿದ್ದೀರಿ. ಅದನ್ನು ಲೆಕ್ಕಮಾಡಿ ನೋಡಿದರೆ ಆ ರೀತಿ ಜಾಸ್ತಿಯಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಖಂಡಿತವಾಗಿ ನೀವು ಕಡಿಮೆ ಮಾಡಿಲ್ಲವೆಂದು ನಾನು ಹೇಳುತ್ತೇನೆ. ಅದನ್ನು ಶೇಕಡ 5ಕ್ಕೆ ಇಳಿಸಬೇಕು. ಈ ಪ್ರೊಹಿಬಿಷನ್ ಸ್ಕ್ರಾಪ್ ಆದಮೇಲೆ ಅದರಿಂದ ಉತ್ಪತ್ತಿ ಈಗ ಸರ್ಕಾರಕ್ಕೆ ಎಷ್ಟು ಪ್ರಮಾಣದಲ್ಲಿ ಬರುತ್ತಾ ಇದೆಯೆಂದರೆ, ಸಾಮಾನ್ಯವಾಗಿ 30 ಕೋಟಿ ರೂಪಾಯಿಗಳಷ್ಟು ಬರುತ್ತಾ ಇದೆ. ಸುಮಾರು ಐದಾರು ಕೋಟಿ ರೂಪಾಯಿಗಳು ಕೇವಲ ಸೇಂದಿ ಬಾಬಿನಿಂದ ಅಥವಾ ಅಬ್ಕಾರಿ ಬಾಬಿನಿಂದಲೇ ಬರುತ್ತಿದೆ. ಅಂದರೆ ಉತ್ಪತ್ತಿ ಒಟ್ಟು ಐದರಷ್ಟು ಆಗಿದೆ. ಮಾರಾಟ ತೆರಿಗೆ ಸುಮಾರು 4 ಕೋಟಿ ರೂಪಾಯಿಗಳಷ್ಟು ಅಗತ್ಯ ವಸ್ತುಗಳ ಮೇಲೆ ನೀವು ಮನ್ನಾ ಮಾಡಬೇಕು. ಈ ಸೇಂದಿ ಬಾಬಿನಿಂದ ಬರುವ ಮಾರಾಟ ತೆರಿಗೆಯ ಉತ್ಪತ್ತಿಯಿಂದ ತಾವು ಜನಸಾಮಾನ್ಯರು ನಿತ್ಯವೂ ಬಳಸ ತಕ್ಕಂಥ ಅಗತ್ಯ ವಸ್ತುಗಳ ಮೇಲೆ ಹೇರತಕ್ಕ ಮಾರಾಟ ತೆರಿಗೆಯನ್ನು ವಜಾ ಮಾಡಬೇಕು. ಆಗ ಜನರಿಗೆ ಉಪಕಾರವಾಗುತ್ತದೆ. ಜನಸಾಮಾನ್ಯರ ಜೀವನ ಸ್ಥಿತಿ ಉತ್ತಮ ರೀತಿಯಲ್ಲಿ ಆಗಬೇಕೆನ್ನುವ ದೃಷ್ಟಿ ತಮಗಿದ್ದ ಪಕ್ಷದಲ್ಲಿ ಜನಗಳು ಪ್ರತಿ ನಿತ್ಯ ಏನೇನು ಅಗತ್ಯ ವಸ್ತುಗಳನ್ನು ಉಪಯೋಗಿಸುತ್ತಾರೋ ಅವಕ್ಕೆ ಮಾರಾಟ ತೆರಿಗೆಯನ್ನು ರಿಯಾಯಿತಿ ಕೊಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಒಂದು ಪೇಳೆ ಅವನ್ನು ಪೂರ್ತಿಯಾಗಿಯೇ ತೆಗೆದುಬಿಟ್ಟರೆ ಇನ್ನೂ ಬಹಳ ಉಪಕಾರವಾದಂತಾಗುತ್ತದೆ. ಅವರು ಮಾರಾಟ ತೆರಿಗೆ ಹಾಕುವ ವಸ್ತುಗಳನ್ನು ಇದರಲ್ಲಿ ಸೇರಿಸಿರುವುದು ಯಾವುದೆಂದರೆ ಎಲ್ಲವೂ ಜನ ಸಾಮಾನ್ಯರು ಉಪಯೋಗಿಸತಕ್ಕಂಥವು. ಜನರು ತಮ್ಮ ಜೀವನೋಪಾಯಕ್ಕಾಗಿ ಉಪಯೋಗಿಸುವ ವಸ್ತುಗಳಿಗೆ ಜಾಸ್ತಿ ಹಣವನ್ನು ಖರ್ಚುಮಾಡಿದರೆ ಅದರಮೇಲೆ ಈ ಮಾರಾಟ ತೆರಿಗೆಯನ್ನು ಹಾಕಕೂಡದು. ತಮಗೇ ಗೊತ್ತಿದೆ, ನಮ್ಮ ದೇಶಕ್ಕೆ ಬೇಕಾದಂಥ ಆಹಾರ ಧಾನ್ಯಗಳನ್ನು ಸಾಕಷ್ಟು ನಾವು ಬೆಳೆಯುತ್ತಾ ಇಲ್ಲ. ನಮಗೇ ಸಾಲದೇ ಭರುತ್ತದೆ. ಧರಗಳು ಬೇರೆ ಜಾಸ್ತಿಯಾಗಿವೆ. ಆದ್ದರಿಂದ ಈಗ ಆಹಾರ ವಸ್ತುಗಳ ಮೇಲೆ ಹೊಸದಾಗಿ ಮಾರಾಟ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ತೆರಿಗೆಯನ್ನು ಹಾಕುವುದು ಖಂಡಿತವಾಗಿ ಸಾಧುವಾದುದಲ್ಲ ಅನೇಕರಿಗೆ ಗೊತ್ತಿದೆ, ಇಂಗ್ಲೆಂಡಿನಲ್ಲಿ ಸಾಕಾದಷ್ಟು ಆಹಾರವನ್ನು ಬೆಳೆಯುತ್ತಾರೆ. ಅಲ್ಲಿನ ರೈತರು ಒಂದು ಕೋಳಿ ಮೊಟ್ಟೆಯನ್ನು ಹೆಚ್ಚಿಗೆ ಉತ್ಪಾದನೆ ಮಾಡಿ ತೋರಿಸಿದರೆ ಅವರಿಗೆ ಅಲ್ಲಿನ ಸರ್ಕಾರ ಸಬ್ಸಿಡಿ ಕೊಡುತ್ತಾರೆ. ಒಂದು ಕ್ವಿಂಟಾರ್ ಹಾಲನ್ನು ಹೆಚ್ಚಿಗೆ ಉತ್ಪಾದನೆ ಮಾಡಿದರೆ ಸಬ್ಸಿಡಿ ಕೊಡುತ್ತಾರೆ. ಆದ್ದರಿಂದ ಇಲ್ಲಿ ಆ ರೀತಿ ನಮ್ಮ ದೇಶದ ರೈತರಿಗೆ ಉಪಕಾರ ಮಾಡುವುದಕ್ಕೆ ಬದಲು ರೈತರು ಬೆಳೆಯುವ ಅಗತ್ಯ ವಸ್ತುಗಳ ಮೇಲೆ ತೆರಿಗೆ ಹಾಕುವ ಒಂದು ನೀತಿ ಸಮಾಜ ದ್ರೋಹ ಹಾಗೂ ದೇಶದ್ರೋಹ ಮಾಡಿದಂತಾಗುತ್ತದೆ. ಇವತ್ತಿನ ದಿವಸ ಜರ್ಮನಿ ಮುಂತಾದ ದೇಶಗಳಲ್ಲಿ ಜನಸಾಮಾನ್ಯರು ಬಳಸುವ ವಸ್ತುಗಳನ್ನು ಸರ್ಕಾರದವರೇ ಕೊಂಡು ಕಡಿಮೆ ದರದಲ್ಲಿ ಮಾರುವ ಪದ್ಧತಿ ಇದೆ. ಇದರಿಂದ ಆಹಾರ ಪದಾರ್ಥಗಳ ಬೆಲೆಗಳು ತಾನಾಗಿಯೇ ಕಡಿಮೆಯಾಗುತ್ತವೆ. ಆದ್ದರಿಂದ ನಮ್ಮ ಜನ ಸುಖವಾಗಿ ಇರಬೇಕಾದರೆ, ಈ ದೇಶದಲ್ಲಿ ಜನಸಾಮಾನ್ಯರಿಗೆ ಉಪಕಾರವಾಗಬೇಕು ಎನ್ನುವ ಇಚ್ಛೆಯಿದ್ದರೆ ನಮ್ಮ ಸರ್ಕಾರದವರು ಅಲ್ಲಿನ ರೀತಿಯಲ್ಲಿ ವ್ಯವಸ್ಥೆಮಾಡಿ ಅಗತ್ಯ ವಸ್ತುಗಳ ಧಾರಣೆಗಳನ್ನು ಕಡಿಮೆ ಮಾಡಬೇಕು. ಆಗ ನಮ್ಮ ಜನರಿಗೆ ಕೊಂಚವಾದರೂ ಉಪಕಾರ ಮಾಡಿದಂತಾಗುತ್ತದೆಂಬುದಾಗಿ ನಾನು ಭಾವಿಸುತ್ತೇನೆ. ಇವತ್ತಿನ ದಿವಸ "Markets are full–stomachs are empty" ಎಂಬಂತಾಗಿದೆ.

Mr. CHAIRMAN.—Repetiton may please be avoided.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇವತ್ತಿನ ದಿವಸ ಜನಸಾಮಾನ್ಯರಿಗೆ ಕೊಳ್ಳುವ ಶಕ್ತಿ ಇಲ್ಲದ್ದರೆ ರೈತನಾದವನು ಎಷ್ಟು ಉತ್ಪತ್ತಿ ಮಾಡಿದರೂ ಅವರಿಗೆ ಉಪಕಾರವಾಗುವುದಿಲ್ಲ. ತಾವೇ ಈ ಯೋಚನೆಮಾಡಿ. ನಿಜವಾಗಿ ಕೇವಲ 2 ರೂಪಾಯಿಗಳ ಕೂಲಿಮಾಡುವ ಒಬ್ಬ ಮನುಷ್ಯ ಈಗಿನ ಧಾರಣೆವಾಸಿಗಳಲ್ಲಿ ತನ್ನ ಸಂಸಾರವನ್ನು ಹೇಗೆ ಸಾಧಿಸಬಲ್ಲ ? ನಿಜವಾಗಿ ಇವರ ಈಗಿನ ತೆರಿಗೆ ನೀತಿಯನ್ನು ಬಿಟ್ಟು ಜನಸಾಮಾನ್ಯರ ಹಾಗೂ ಬಡವರ ಕಡೆ ತಮ್ಮ ಮನಸ್ಸು ಹರಿಯಲಿ, ಈ ದೇಶದಲ್ಲಿ ಕೈಗಾರಿಕೆ ಹಾಗೂ ವ್ಯಾಪಾರಾಭಿವೃದ್ಧಿ ಮಾಡುವುದಕ್ಕೆ ತಾವು ಏನೂ ಮನಸ್ಸು ಮಾಡಿಲ್ಲ, ಅದನ್ನೂ ಕೂಡ ಜಾಗ್ರತೆಯಾಗಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. H. PATIL.—Is it the intention of the Chair to close it to-day?

Sri H. SIDDAVEERAPPA.—If there are more number of members to participate, it may not be correct to close it to-day because it will not be possible for all to participate.

Mr. CHAIRMAN.—It is not the intention of the Chair to shut out any member from participating. But there are common points which have already been urged and they are being repeated again and again. We have got to finish the Bill to-day. Tomorrow we are taking up Mahajan Commission's report.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಮ್ಮ ಎದುರಿಗೆ ಬಂದಿರುವ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತಾ, ಕೆಲವು ಮಾತುಗಳನ್ನು ಮಾನ್ಯ ಸಚಿವರ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿವಸ ಮಾನ್ಯ ಸಚಿವರು ಹೇಳಿದಂಥ ಮಾತುಗಳನ್ನು ಗಮನದಲ್ಲಿಟ್ಟುಕೊಂಡರೆ, ಪ್ರಾಮುಖ್ಯವಾಗಿ ಅವರು ಸುಪ್ರೀಂ ಕೋರ್ಟ್ ನಿರ್ಣಯವಾದ ನಂತರ ಬದಲಾವಣೆ ಮಾಡುವುದು ಅನಿವಾರ್ಯವಾಯಿತು ಎಂದು ಹೇಳಿದರೆ ಅದನ್ನು ಒಪ್ಪಬಹುದು. ನಂತರ ಮುಂದೆ ಹೋಗಿ ಇವತ್ತಿನ ದಿವಸ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಕ್ಕಾಗಿ ಈ ತಿದ್ದುಪಡಿಯನ್ನು ಮಾಡಬೇಕಾಯಿತು ಎಂದು ಹೇಳಿದರು. ಅದು ಬಹಳ ಸಂತೋಷಕರವಾದ ಸಂಗತಿಯೆಂಬುದಾಗಿ ನಾನು ಅಂದುಕೊಂಡಿದ್ದೇನೆ. ನಂತರ ಅವರ ಹೇಳಿಕೆಯನ್ನು ಮತ್ತು ಅವರು ಕೊಟ್ಟಂಥ ತಿದ್ದುಪಡಿ ಮಸೂದೆಯನ್ನು ಓದಿ ನೋಡಿದರೆ ನಿಜವಾಗಿ ಒಂದಕ್ಕೊಂದು ಸಂಪರ್ಕವಿದೆಯೇ ಎನ್ನುವ ಮಾತನ್ನು ವಿಚಾರ ಮಾಡಬೇಕಾಗಿದೆ. ಈಗ ಇರುವ ತೆರಿಗೆಗಳನ್ನೂ, 4ನೇ ಷೆಡ್ಯೂಲ್‌ನಲ್ಲಿ ಕೊಟ್ಟಿರುವುದನ್ನೂ ಹೋಲಿಸಿ ನೋಡಿದರೆ ಕೆಲವು ಪದಾರ್ಥಗಳಿಗೆ ಶೇಕಡ 2–3 ರಷ್ಟು ಜಾಸ್ತಿಮಾಡಿದ್ದಾರೆ. ಗ್ರಾಮೋದ್ಯೋಗಗಳಿಗೆ ಬೇಕಾದಂಥ

ವಸ್ತುಗಳ ಬಗ್ಗೆ ಶೇಕಡ 1-2 ರಷ್ಟು ಜಾಸ್ತಿಮಾಡಿದ್ದಾರೆ. ಕಡಲೆಕಾಯಿಗೆ ಶೇಕಡ 2-3 ರಷ್ಟು ಈ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಆದ್ದರಿಂದ ಅವರು ಮಾಡಿರುವುದು ಹೇಗಿದೆಯೆಂದರೆ ವಿವಿಧ ಹಂತದಲ್ಲಿ ತೆರಿಗೆಗಳನ್ನು ಹೆಚ್ಚುಮಾಡಿರುವುದು ಆಗಿದೆ. ಮಾನ್ಯ ಸಚಿವರು ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯನ್ನು ಮತ್ತು ಸಹಕಾರೀ ಸಂಘ ಉದ್ದಿಮೆಗಾರರ ಸ್ಥಿತಿಗತಿಗಳನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ತೆರಿಗೆ ವರ್ಷ್ಕೇ ವರ್ಷ್ಕೇ ಇಷ್ಟು ಜಾಸ್ತಿ ಆಗುವುದಕ್ಕೆ ಅವಕಾಶವನ್ನು ಕೊಡ ಕೂಡದು. ಶ್ರೀ ರಾಮಕೃಷ್ಣ ಹೆಗ್ಗಡೆಯವರು ಈ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಹೇಳಿದ ಒಂದು ವಾದಕ್ಕೂ ಈಗ ಹೇಳುವ ಒಂದು ವಾದಕ್ಕೂ ಬಹಳ ವ್ಯತ್ಯಾಸವಿದೆ. ಅದು ಒಂದು ವಿಪರ್ಯಾಸಕ್ಕೆ ಆಸ್ಪದವಾದಂತಾಗಿದೆ. ನಿಜವಾಗಿ ಈ ಮಸೂದೆಯಲ್ಲಿ ಆಳವಡಿಸಿರುವ ಕಾನೂನಿಗೂ ಮತ್ತು ಜನರ ಒಂದು ಶೋಷಣೆಗೂ ಒಂದು ರೀತಿ ಸಂಬಂಧವಿದೆಯೆಂಬುದು ಇದರಲ್ಲಿ ಸ್ಪಷ್ಟವಾಗಿದೆ. ಒಕ್ಕಲಿಗರಿಗೆ ಇವತ್ತಿನ ದಿವಸ ನೇರವಾಗಿ ಹೇಳೆಯಲ್ಲಿ ಸಾಕಷ್ಟು ಪ್ರಮಾಣದ ಬೆಲೆ ಸಿಗುತ್ತಿಲ್ಲ. ಬಳಕೆಗಾರರಿಗೂ ಅನುಕೂಲವಾಗುವಂಥ ಫಲ ದೊರಕುತ್ತಾ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಬಹುಶಃ ಇದನ್ನು ಸರಿಯಾಗಿ ತಿಳಿದುಕೊಳ್ಳಲಲ್ಲವೆಂದು ಹೇಳುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಈಗ ತೆರಿಗೆ ಹೆಚ್ಚುಮಾಡುವ ಈ ತಿದ್ದುಪಡಿ ಮಸೂದೆ ಡಿಕ್ಲೇರ್ಡ್ ಗುಡ್ಸ್‌ಗೆ ಸಂಬಂಧಪಟ್ಟುದು. ಯಾವ್ಯಾವ ಸಾಮಾನುಗಳು ಎರಡು ರಾಜ್ಯಗಳ ಮಧ್ಯದಲ್ಲಿ ಹೋಗಿ ಬರುತ್ತವೋ ಅಂತಹ ಸಾಮಾನುಗಳ ಬಗ್ಗೆ ಈ ವಿಚಾರ ಬರುತ್ತದೆ. ಬೇರೆ ವಸ್ತುಗಳ ಬಗ್ಗೆ ತೆರಿಗೆಯನ್ನು ಹೆಚ್ಚುಮಾಡುವ ಉದ್ದೇಶ ಯಾವುದೂ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸಂತೋಷ. ನಾನು ಅದನ್ನು ತಿಳಿದುಕೊಂಡೇ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಅದಕ್ಕೆ ಬೇರೆ ರೀತಿಯಲ್ಲಿ ಹೆಚ್ಚಿನ ತೆರಿಗೆಯನ್ನು ಹಾಕುತ್ತಾರೆ. ಗೊತ್ತಿದೆ. ನಮ್ಮ ಮಾಲುಗಳನ್ನು ಇಂಟರ್‌ನ್ಯಾಷನಲ್ ಟ್ರೇಡಿಗಾಗಿ ಅಲ್ಲಿ ಉದ್ದಿಮೆಗಾರರಿಗೆ ಕಳುಹಿಸಿದರೆ ನಾವು ಕೊಡುವ ತೆರಿಗೆ ನಮ್ಮ ಉದ್ದಿಮೆ ಮೇಲೆಯೂ ಬಿದ್ದು ಈಗ ಒಂದು ಬಲವಾದ ಪೆಟ್ಟು ಬಂದಿದೆ. ಎಲ್ಲ ದೃಷ್ಟಿಯಿಂದಲೂ ಕೂಲಂಕಷವಾಗಿ ಪರಿಶೀಲಿಸಲು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಒಳ್ಳೆಯದು. ಇದಕ್ಕೆ ಬಲವತ್ತರವಾದ ಕಾರಣಗಳು ಇರುವುದಾದರೂ ವಿರೋಧಪಕ್ಷದವರ ಸಹಜವಾದ ಸೂಚನೆಗಳನ್ನು ಇವರು ಗಮನದಲ್ಲಿಡುವುದಿಲ್ಲ. ನಾವು ಕೊಡತಕ್ಕ ಪ್ರಗತಿ ಪರವಾದ ಸೂಚನೆಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಡಬೇಕೆಂದು ನಾನು ಸವಿನಯದಿಂದ ಈಗ ಪ್ರಾರ್ಥಿಸುತ್ತೇನೆ. ನಿಜವಾಗಿ ಉದ್ದಿಮೆಗಾರರು ಪ್ರಾರಂಭವಾಗಬೇಕಾದಂಥ ಹೊಸ ಉದ್ದಿಮೆಗಳಿಗೆ ಹೆಚ್ಚು ಪ್ರೋತ್ಸಾಹ ನಿರಾತಂಕವಾಗಿ ಸಿಗಬೇಕಾಗಿದೆ. ಆದ್ದರಿಂದ ಈ ಕಾನೂನನ್ನು ಅಮಲಿನಲ್ಲಿ ತರಬೇಡಿ. ನಿಜವಾಗಿ ನಿಷ್ಪಕ್ಷಪಾತದೃಷ್ಟಿಯಿಂದ ಇಂತಿಂಥ ಉದ್ದಿಮೆಗಳಿಗೆ ಹೆಚ್ಚಿನ ತೆರಿಗೆ ಹಾಕಿಲ್ಲ, ಏನಾಯತಿ ಕೊಟ್ಟಿದೆಯೆಂಬುದಾಗಿ ತೀವ್ರವಾಗಿ ಪ್ರಕಟಣೆ ಮಾಡಬೇಕು.

ಯಾವ ಯಾವ ಉದ್ದಿಮೆಗಳನ್ನು ಸರ್ಕಾರದವರು ಸ್ಥಾಪಿಸಬೇಕು ಎನ್ನುವುದನ್ನು ಸರಿಯಾಗಿ ಆಲೋಚನೆ ಮಾಡಬೇಕು. ಕಲ್ಕತ್ತಾಕ್ಕೆ ಹೋಗಿ ಇಂಡಸ್ಟ್ರಿಯಲಿಸ್ಟ್‌ಗಳನ್ನು ಆಹ್ವಾನ ಮಾಡುತ್ತೀರಿ. ಬೊಂಬಾಯಿಗೆ ಹೋಗಿ ಕರೆಯುತ್ತೀರಿ. ಯಾವುದೋ ಉದ್ದಿಮೆದಾರರಿಗೆ ಸವಲತ್ತು ಕೊಡಬೇಕು ಎನ್ನುವ ದೃಷ್ಟಿಯಿಂದ ಈ ತರಹ ಧೋರಣೆ ವಹಿಸಿದ್ದೀರಿ ಎಂದು ಸಂಶಯ ಬರುತ್ತದೆ. ಮನಸ್ಸಿನೊಳಗೆ ಏನು ಇದೆ ಎಂದು ಹೇಳಲಾರಿರಿ. ಎಂತೆಂತಹ ಉದ್ದಿಮೆಗಳು ಸವಲತ್ತುಗಳನ್ನು ಪಡೆಯಲಕ್ಕೆ ಅರ್ಹವಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ. ಶ್ರೀ ರಾಮಕೃಷ್ಣ ಹೆಗಡೆಯವರು ಜನಪ್ರಿಯರು ಎಂಬುದು ಗೊತ್ತು. ಆದರೂ ಈ ಸಭೆಯ ಸಂಪೂರ್ಣ ಬೆಂಬಲ ಪಡೆಯಬೇಕಾಗಿತ್ತು; ಈಗಲಾದರೂ ಸರಿಪಡಿಸಿಕೊಳ್ಳಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ನಾನು ಈ ವಿಧೇಯಕವಾದ ಪ್ರತಿಯೊಂದು ಸೆಕ್ಷನ್ ವಿಚಾರಣೆ ಮಾಡಲಕ್ಕೆ ಹೋಗುವುದಿಲ್ಲ. ಈ ಸಮಯದೊಳಗೆ ಇಷ್ಟು ಹೇಳಬಲ್ಲೇ, ಪ್ರತಿಯೊಂದು ಸೆಕ್ಷನ್ ಓದಿದರೂ ಸಹಿತ ಕದಾಚಿತ್ ಶ್ರೀ ರಾಮಕೃಷ್ಣ ಹೆಗಡೆಯವರೇ ಇಷ್ಟು ಅಧಿಕಾರಪಡೆಯಲಿಕ್ಕೆ ಯಾತಕ್ಕೆ ಹೊರಟಿದ್ದಾರೆ? ಈಗ್ಗೊತ್ತು ಕಾಂಗ್ರೆಸ್ ಅಧಿಕಾರದಲ್ಲಿ ಇರಬಹುದು, ನಾಳೆ ಕಮ್ಯೂನಿಸ್ಟ್ ಅಧಿಕಾರ ಬರಬಹುದು ಅಥವಾ ಇತರೇ ವಿರೋಧಿ ಪಕ್ಷದವರು ಅಧಿಕಾರಕ್ಕೆ ಬರುವ ಕಾಲ ಬರುತ್ತದೆ. ಸೆಕ್ಷನ್ 1 (2) ನಲ್ಲಿ ಹೀಗೆ ಹೇಳಿದೆ:

> "All accounts and registers maintained by dealers in the ordinary course of their business and documents relating to the stock of goods of, or purchases, sales and deliveries of goods by any dealer, the goods in their possession and their offices,

(ಶ್ರೀ ಕೆ. ಎಚ್. ಪಾಟೀಲ್)

shops, go downs, vessels receptacles or vehicles, shall be open to inspection at all reasonable times by such officers as may be authorised in this behalf."

ಇದಕ್ಕಿಂತ ಹೆಚ್ಚು ಮನಾಪಲ ಅಧಿಕಾರ ಮತ್ತೆ ಯಾವುದಾದರೂ ರಾಜ್ಯದಲ್ಲಿ ಸಿಕ್ಕಿದೆಯೇ? ತಾವು ನೋಡುತ್ತಿದ್ದೀರಿ, ಪೋಲೀಸಿನವರಿಗೇ ಕೊಟ್ಟ ಅಲ್ಪ ಅಧಿಕಾರದಿಂದ ಎಷ್ಟು ಅನಾಹುತವಾಗುತ್ತದೆ ಎಂದು. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಅವಕಾಶ ಕೊಟ್ಟರೆ ಲಂಚ ತೆಗೆದುಕೊಳ್ಳಲಿಕ್ಕೆ ಅಧಿಕೃತವಾಗಿ ಲೈಸನ್ಸ್ ಕೊಟ್ಟ ಹಾಗಾಗುತ್ತದೆ. ಲಂಚಕೊಡಲಿಕ್ಕೆ ತಕರಾರು ಮಾಡಿದರೆ ಇಲ್ಲಿ ವ್ಯವಹಾರ ಮಾಡಲಾರದಂತೆ ಕೂಡ ಮಾಡುವ ಅಧಿಕಾರ ಕೊಡುತ್ತೀರಿ. ನಿಮ್ಮಲ್ಲಿರುವ ಭೀತಿ ಅವರಿಗೆ ಇರುವುದಿಲ್ಲ. ನಿಮ್ಮ ಅಧಿಕಾರಿಗಳು ಬೇಕಾದಂಥ ದುಷ್ಕೃತ್ಯ ಮಾಡಲಿಕ್ಕೆ ಹಿಂಜರಿಯುವುದಿಲ್ಲ. ಅಧಿಕಾರ ಕೊಡುವಾಗ ಎರೋಡನೆ ಮಾಡಿಕೊಟ್ಟರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ರಾಜ್ಯದೊಳಗೆ ವ್ಯವಹಾರ ನಡೆಯುವುದಿಲ್ಲ, ಕೈಗಾರಿಕ ನಡೆಯುವುದಿಲ್ಲ. ಈ ರಾಜ್ಯದಲ್ಲಿ ಕೈಗಾರಿಕೆ ನಡೆಸಲಿಕ್ಕೆ ವ್ಯವಹಾರ ಮಾಡಲಿಕ್ಕೆ ಅಡಚಿಕೆ ಹುಟ್ಟುವ ರೀತಿಯಲ್ಲಿ ಇಗಿದೆ. ಇದನ್ನು ಪರಿಶೀಲಿಸಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ. ಪಕ್ಕಲಗರಿಗೆ, ವಿಶೇಷವಾಗಿ ಕನ್ಸ್ಯೂಮರ್ಸ್‌ಗೆ ಪುಡಗ್ಸ್ಯೂನ್ಸ್ ಮೇಲೆ ವಿಶೇಷವಾಗಿ ಕರ ಹಾಕುವುದು ಸರಿಯಲ್ಲ. ಈಗಾಗಲೇ ಪಾನಪ್ರತಿಬಂಧವನ್ನು ಮುಕ್ತಮಾಡಿ ಸಾಕಷ್ಟು ಹಣ ಪಡೆಯಲಿಕೆ ಹತ್ತಿದ್ದೀರಿ. ಪಾನಪ್ರತಿಬಂಧದಿಂದ ಮುಕ್ತಮಾಡುವುದರಿಂದ ಬರುವ ಹಣವನ್ನು ಪಾನ ಎಡಯಬೇಡಿರಿ ಎಂದು ಪ್ರಚಾರ ಮಾಡಲು ತೆಗೆದು ಇಡುತ್ತೇವೆಂದು ಹೇಳುತ್ತೀರಿ. ಒಂದು ಕಡೆ ಅಂಗಡಿ ಚಾಲು ಮಾಡುವುದು, ಇನ್ನೊಂದು ಕಡೆ ಕುಡಿಯಬೇಡಿರಿ ಎಂದು ಹೇಳುವುದು ಇದು ಯಾವ ತತ್ವವೋ ನನಗೆ ಗೊತ್ತಾಗುವುದಿಲ್ಲ. ರೈತರ ಮೇಲೆ ಹೆಚ್ಚು ಟ್ಯಾಕ್ಸ್ ಬೀಳದಂತೆ ಮಾಡಿರಿ. ಪುಡ್ ಗ್ರೈನ್ಸ್ ಮೇಲೆ ಟ್ಯಾಕ್ಸ್ ಹಾಕದ ಹಾಗೆ ಪ್ರಯತ್ನ ಮಾಡಿರಿ. ಎಜುಕೇಷನ್ ಟ್ಯಾಕ್ಸ್, ಹಲ್ತ್ ಟ್ಯಾಕ್ಸ್ ಯಾವ ಟ್ಯಾಕ್ಸ್ ಹಾಕಬೇಡಿರಿ. ಯಾವ ಡಿಪಾರ್ಟಮೆಂಟ್ ಮೇಲೆ ಟಾಕ್ಸ್ ಹೇರಲಿಕ್ಕೆ ಹೊರಟಿದ್ದೀರಿ? ಶ್ರೀಮಾನ್ ನಿಜಲಿಂಗಪ್ಪನವರು ಅಖಿಲ ಭಾರತದ ನಾಯಕರಾಗಲಿಕ್ಕೆ ಹೊರಟ್ಟಿದ್ದಾರೆ. ಅವರ ಸರ್ಕಾರದವರು ಜಿಗಣಿಯೋಪಾದಿಯಲ್ಲಿ ರೈತರ ರಕ್ತವನ್ನು ಹೀರಬೇಡಿರಿ ಎಂದು ಹೇಳುತ್ತೇನೆ. ಈ ಟ್ಯಾಕ್ಸ್ ತಗೆದುಹಾಕಿ ಕಡಿಮೆ ಮಾಡುವ ಥೋರಣ್ ಬರಲಿ, ಹೆಚ್ಚು ಮಾಡುವುದು ಬೇಡ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair]

†ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಹೊಸಕೋಟೆ).—ಸನ್ಮಾನ್ಯ ಅಧ್ಯಕ್ಷರೇ, ಅನನ್ಯ ಭಕ್ತಿಯಿಂದ ದೇವರ ದರ್ಶನಕ್ಕಾಗಿ ಕಾಯುತ್ತಿದ್ದ ಭಕ್ತನೆದುರು ದೆವ್ವ ಬಂದಂತಾಗಿದೆ. ಈ ಮಸೂದೆ 1:35 ರಲ್ಲಿ ಪಾಪಾರ್ಜಿತವಾದ ಹಂಡ, ಸಾರಾಯಿಂದ ಬರುವ ಹಣ ಬೇಡ, ಸರ್ಕಾರದ ಬೊಕ್ಕಸಕ್ಕೆ ಎಲ್ಲರೂ ಸೇಲ್ಸ್‌ಟಾಕ್ಸ್ ರೂಪದಲ್ಲಿ ಕೊಡುತ್ತೇವೆ ಎಂದು ಹೇಳಿ ಪ್ರಖ್ಯಾತ ದೇಶದ ನಾಯಕರಾದ ಚಕ್ರವರ್ತಿ ರಾಜಗೋಪಾಲಚಾರಿಯವರು ಸುಮಧುರವಾದ ವಾತಾವರಣದಲ್ಲಿ ತಂದಂಥ ಸೇಲ್ಸ್‌ಟ್ಯಾಕ್ಸ್‌ನ್ನು ಜನರು ಸ್ವಾಗತಿಸಿದರು. ಮೈಸೂರು ದೇಶದಲ್ಲೂ ಕೂಡ ಅದೇ ಭಾವನೆಯಿಂದ ಜನತೆ ಸಂತೋಷದಿಂದ ಒಪ್ಪಿಕೊಂಡು ಇದುವರೆಗೂ ಕೊಡುತ್ತಾ ಬಂದರು. ಈಚೆಗೆ ಪಾಪಾರ್ಜಿತವೆಂದು ಪರಿಗಣಿಸಲ್ಪಟ್ಟ ಹಂಡ, ಸಾರಾಯಿ ಮೂಲಕ ಮಾಡುವ ಸಂಪಾದನೆ ಮತ್ತೆ ನರಿ, ಅದು ನಮಗೆ ಬೇಕೇ ಬೇಕು ಎಂದು ಹೇಳಿ ಪಾನ ನಿರೋಧ ಜಾರಿಗೆ ತರಲಿಕ್ಕೆ ಕೈರಾಗದ ಮಂತ್ರಿವರ್ಯರು ಪಾನವನ್ನು ಜಾರಿಗೆ ತಂದರು. ಆ ಕೀರ್ತಿ ಅವರಿಗೆ ಇರುತ್ತದೆ. ಅದುದು ಆಯಿತು. ನಮ್ಮಲ್ಲಿ ಯಾವುದನ್ನು ಅದಕ್ಕೆ ಪ್ರತಿಫಲವಾಗಿ ಕೊಟ್ಟಿದ್ದೇವೋ ಅಂತಹ ಸೇಲ್ಸ್‌ಟ್ಯಾಕ್ಸ್‌ನ್ನು ಮನ್ನ ಮಾಡುತ್ತಾರೆ ಎಂದು ಜನರು ನಿರೀಕ್ಷಿಸುತ್ತಾ ಇದ್ದರು. ಹಾಗೆ ಇರುವಲ್ಲಿ ಈವತ್ತಿನ ದಿವಸ ತಿದ್ದುಪಡಿ ಮಸೂದೆ ಕಾನೂನು ನಮ್ಮ ಎದುರಿಗೆ ಇಟ್ಟಿರುವುದನ್ನು ನೋಡಿದರೆ ನಿಜವಾಗಿಯೂ ಶೋಚನೀಯವಾಗಿದೆ ಹಾಗೂ ಬಹಳ ಆಶ್ಚರ್ಯಕರವಾಗಿಯೂ ಇದೆ.

6-00 P.M.

ಈಗಾಗಲೇ ಸರ್ಕಾರಕ್ಕೆ ಬರಬೇಕಾದ ಸೇಲ್ಸ್ ಟ್ಯಾಕ್ಸ್‌ನ ಬಾಕಿ ಬೇಕಾದಷ್ಟು ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ರೀತಿ ಸರ್ಕಾರದವರಿಗೂ ಸಹ ಗೊತ್ತಿದ್ದರೂ ಸಹ ಷೆಡ್ಯೂಲ್ 4ರ

ಪ್ರಕಾರ ಧಾರಣೆಗಳನ್ನು ಹೆಚ್ಚಿಸಬೇಕೆಂದು ಮಾಡಿದ್ದಾರೆ. ಈ ರೀತಿ ಹೆಚ್ಚು ಮಾಡುವುದರಿಂದ ಎಷ್ಟು ಆದಾಯ ಬರುತ್ತದೆ ಎಂಬುದನ್ನು ಇಲ್ಲಿ ತಿಳಿಸಿಲ್ಲ. ಪೆಡ್ರೋಲ್ ನಾಲ್ಕರಲ್ಲಿ ಇರತಕ್ಕಂಥ ಪದಾರ್ಥಗಳು ಜನತೆಯು ನಿತ್ಯಜೀವನದಲ್ಲಿ ಬಳಸುವುದು ಆಗಿವೆ. ಧಾರಣೆವಾಸಿಗಳು ಹೆಚ್ಚುತ್ತಿರುವುದರಿಂದ ಸಾಮಾನ್ಯ ಜನರು ಜೀವನ ಮಾಡುವುದು ಕಷ್ಟವಾಗಿರುತ್ತದೆ. ಹಣದ ಆಸೆಗೆ ಈ ಮಸೂದಾ ಕಾನೂನನ್ನು ತಂದಿರುವುದು ನಿಜಕ್ಕೂ ಪ್ರಜಾಸರ್ಕಾರಕ್ಕೆ ಒಳ್ಳೆಯದಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಆದಾಯ ದೃಷ್ಟಿಯಿಂದ ನೋಡುವುದಾದರೆ ಸರ್ಕಾರಕ್ಕೆ ಬರಬೇಕಾದ ಬಾಕಿ, ತೆರಿಗೆಗಳು ಸರಿಯಾಗಿ ವಸೂಲಾಗುತ್ತಿಲ್ಲ. ಇವನ್ನು ಎಲ್ಲರೂ ಒಪ್ಪುತ್ತಾರೆ. ಏಕೆಂದರೆ ತಾವು ತಮ್ಮ ಸಿಬ್ಬಂದಿಗಳ ಕಡೆ ಸ್ವಲ್ಪ ನೋಡಿ. 10ಕ್ಕೆ ಒಬ್ಬರು ಪ್ರಾಮಾಣಿಕರು ಇದ್ದರೆ ಅಪರೂಪ. ಉಳಿದವರು ಅಪ್ರಮಾಣಿಕರಾಗಿದ್ದಾರೆಂದು ಹೇಳಬಹುದು. ಸೇಲ್ಸ್ ಟ್ಯಾಕ್ಸ್ ಆಫೀಸರ್ ಒಬ್ಬರು ದಿನಕ್ಕೆ 50 ರೂಪಾಯಿಗಳನ್ನು ತನಗೆ, 5 ರೂಪಾಯಿ ತನ್ನ ಗುಮಾಸ್ತನಿಗೆ, 1 ರೂಪಾಯಿ ತನ್ನ ಜವಾನನಿಗೆ ಎಂದು ಲಂಚ ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಸರ್ಕಾರಕ್ಕೆ ಆದಾಯ ಬರುವುದು ತಪ್ಪುತ್ತಿದೆ. ಇಂತಹ ಲೋಪಗಳನ್ನು ಸರ್ಕಾರದವರು ಸರಿಪಡಿಸಿದರೆ ಆದಾಯ ಹೆಚ್ಚು ಬರುತ್ತದೆ. ಅದು ಬಿಟ್ಟು ಜನತೆಯಮೇಲೆ ಮತ್ತೆ ಮತ್ತೆ ತೆರಿಗೆಯನ್ನು ಹೊರಿಸುವುದು ಸರಿಯಲ್ಲವೆಂದು ಸರ್ಕಾರಕ್ಕೆ ತಿಳಿಸುತ್ತೇನೆ. ಅಕ್ಕಿ, ರಾಗಿ, ಜೋಳ ಮುಂತಾದ ದಿನಬಳಕೆಯ ಪದಾರ್ಥಗಳ ಮೇಲೂ ಸಹ ಸೇಲ್ಸ್‌ಟ್ಯಾಕ್ಸ್ ಇದೆ. ಧಾರಣೆಗಳು ಹೆಚ್ಚುತ್ತಿವೆಯೇ ಹೊರತು, ಕಡಿಮೆಯಾಗಿಲ್ಲ. ಬಡವರು ಉಪಯೋಗಿಸುವ ಈ ಆಹಾರಪದಾರ್ಥಗಳ ಮೇಲಿನ ತೆರಿಗೆಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಡೆಲಿಗೇಟೆಡ್ ಲೆಜಿಸ್‌ಲೇಷನ್ ಮಾಡುವುದಕ್ಕೆ ಈ ಬಿಲ್‌ನಲ್ಲಿ ಅವಕಾಶ ಮಾಡಿಕೊಂಡಿದ್ದೀರಿ ಅದಕ್ಕೆ ಅವಕಾಶ ಕೊಡಬೇಡಿ. ಇದರಿಂದ ಅಧಿಕಾರಿಗಳು ಅಷ್ಟೊಂದು ಚೆನ್ನಾಗಿ ಅಧಿಕಾರ ಚಲಾಯಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ತಮ್ಮ ಮಟ್ಟ ಏನೂ, ತಮ್ಮ ಕೈಕೆಳಗಿನ ಅಧಿಕಾರಿಗಳ ಮಟ್ಟ ಏನು ಎಂಬುದನ್ನು ತಾವೇ ಯೋಚನೆ ಮಾಡಬೇಕಾಗಿದೆ. ಅಧಿಕಾರಿಗಳಿಗೆ ಈ ರೀತಿಯ ಅಧಿಕಾರ ಕೊಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಪುನರ್— ಆಲೋಚಿಸಿ ಬೇರೆ ಒಂದು ಸೂಕ್ತವಾದ ತಿದ್ದುಪಡಿಯನ್ನು ಸೂಚಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚೇಗೌಡ.—ಸ್ಯಾಮಿ, 6 ಗಂಟೆಯ ನಂತರ ಅರ್ಧ ಗಂಟೆಯ ಚರ್ಚೆ ಇರುವುದರಿಂದ ಈ ಬಿಲ್ಲಿನ ಮೇಲಿನ ಚರ್ಚೆಯನ್ನು ನಾಳೆಗೆ ಹಾಕಿ, ಈಗ ಅರ್ಧ ಗಂಟೆಯ ಚರ್ಚೆಯನ್ನು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ. ಅಲ್ಲದೆ ನಾಳೆಯಿಂದ ಮಹಾಜನ್ ಆಯೋಗದ ವರದಿ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕಾಗಿದೆ.

ಅಧ್ಯಕ್ಷರು.—ರ್ಯಾಂಡ್ ಅಕ್ಟಿಜಿಷನ್ ಬಿಲ್‌ಗೆ 3 ಗಂಟೆಯ ಕಾಲ ವ್ಯಯವಾಗಿದೆ. ಒಂದು ಬಿಲ್‌ಗೆ ಇಷ್ಟು ಎಂದು ಕಾಲವನ್ನು ಗೊತ್ತುಮಾಡಿದಮೇಲೆ ಅಷ್ಟೇ ಕಾಲದಲ್ಲಿ ಮುಗಿಸಿದರೆ ಸರಿಯಾಗುತ್ತದೆ. ಅದು ಬಿಟ್ಟು ಎಲ್ಲರೂ ಮಾತನಾಡಬೇಕೆಂದರೆ ಕಾಲದ ವ್ಯಯವಾಗುತ್ತದೆ. ಈಗ ಯಾವ ರೀತಿ ಮಾಡಬೇಕೆಂಬುದನ್ನು ಎರಡು ಕಡೆಯವರೂ ಸೇರಿ ಒಂದು ತೀರ್ಮಾನಕ್ಕೆ ಬಂದರೆ ಅದರಂತೆ ಮಾಡೋಣ.

ಶ್ರೀ ಟಿ. ಆರ್. ಶಾಮಣ್ಣ.—ಪ್ರಯೋಜನವಾಗುವ ವಿಷಯಗಳ ಮೇಲೆ ಎಲ್ಲರೂ ಮಾತನಾಡುತ್ತಾರೆ. ಸುಮ್ಮನೆ ಸಭೆಯ ಕಾಲವನ್ನು ಯಾರೂ ವ್ಯರ್ಥಮಾಡುವುದಿಲ್ಲ.

ಅಧ್ಯಕ್ಷರು.—ಪ್ರಯೋಜನವಿಲ್ಲದ ವಿಷಯಗಳನ್ನು ಮಾತನಾಡಲು ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಅವರೂ ಸಹ ಸದಸ್ಯರುಗಳು 'ಪ್ರಾಮುಖ್ಯವಾದ ವಿಷಯ ಹೇಳುತ್ತೇನೆ, ಹೊಸ ವಿಷಯ ಹೇಳುತ್ತೇನೆ, ಅವಕಾಶ ಕೊಡಿ' ಎಂದು ಹೇಳಿ ಸಮಯವನ್ನು ವ್ಯರ್ಥ ಮಾಡುತ್ತಾರೆ.

ಶ್ರೀ ಬಿ. ಪಿ. ಗಂಗಾಧರ್.—ಇದು ಒಂದು ಪ್ರಾಮುಖ್ಯವಾದ ವಿಧೇಯಕ ಇದರ ಮೇಲೆ ಮಾತನಾಡಲು ಎಲ್ಲರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಹೇಳಿದರೆ ಪ್ರಾಮುಖ್ಯತೆ ಬರುವುದಿಲ್ಲ. ತಾವು ದಯವಿಟ್ಟು ಕುಳಿತು ಕೊಳ್ಳಬೇಕು.

ಶ್ರೀ ಬಿ. ಪಿ. ಗಂಗಾಧರ್.—ನುಮ್ಮನೆ ಯಾರೂ ಮಾತನಾಡುವುದಿಲ್ಲ. ಪ್ರಾಮುಖ್ಯವಾದ ವಿಷಯವಿದ್ದರೆ ಮಾತ್ರ ಮಾತನಾಡುತ್ತೇವೆ.

ಅಧ್ಯಕ್ಷರು.—ಒಬ್ಬೊಬ್ಬರು ಒಂದೊಂದು ರೀತಿಯಿಂದ ಹೇಳಿದರೆ ಸಾಧ್ಯವಾಗುವುದಿಲ್ಲ ಎರಡು ಕಡೆಯವರೂ ಹೊರಗೆ ಸೇರಿ ಒಂದು ನಿರ್ಣಯಕ್ಕೆ ಬನ್ನಿ. 'ನಾನು ಆ ಬಿಲ್ ಮೇಲೆ ಮಾತನಾಡಲಿಲ್ಲ, ಈ ಬಿಲ್ ಮೇಲೆ ಮಾತನಾಡುತ್ತೇನೆ' ಎಂದು ಎಲ್ಲರೂ ಕೇಳಿದರೆ ಸಮಯವನ್ನು ಯಾವ ರೀತಿ ಕೂಡಿಸಿ ಕೊಡುವುದಕ್ಕಾಗುತ್ತದೆ ? ಎರಡು ಕಡೆಯವರೂ ಒಂದು ತೀರ್ಮಾನಕ್ಕೆ ಬರುವವರೆಗೆ ಶ್ರೀ ಅರಕೇರಿಯವರು ಮಾತನಾಡುತ್ತಿರಲಿ

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಈ ತಿದ್ದುಪಡಿಯು ಸಮಯೋಚಿತವಾಗಿಲ್ಲ, ಸಮಂಜಸವಾಗಿಲ್ಲ ಎನ್ನುವಂಥ ವಿಷಯವನ್ನು ವಿಷಾದದಿಂದ ಹೇಳಿ ಈ ತಿದ್ದುಪಡಿಯನ್ನು ವಿರೋಧಿಸುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ ; ಈಗಾಗಲೆ ಪ್ರತಿಯೊಬ್ಬ ನಾಗರೀಕನು ಅನೇಕ ಟ್ಯಾಕ್ಸ್‌ಗಳನ್ನು ಕೊಡುವುದರಿಂದ ಬಗ್ಗಿ ಹೋಗಿರುವಾಗ, ಇಂತಹ ಒಂದು ಸಮಯದಲ್ಲಿ ಇನ್ನಷ್ಟು ತೆರಿಗೆಯನ್ನು ಅವರ ಮೇಲೆ ಹೊರಿಸಬೇಕೆಂದು ಈ ರೀತಿ ತಿದ್ದುಪಡಿಯನ್ನು ತಂದಿರುವುದು ನಿಜಕ್ಕೂ ವಿಷಾದನೀಯವಾಗಿದೆ. ಈಗಾಗಲೆ ಪಾನನಿರೋಧವನ್ನು ನಡಿಲಿಸಿ ಪ್ರತಿವರ್ಷ 8–10 ಕೋಟಿ ರೂಪಾಯಿಗಳಷ್ಟು ಆದಾಯವನ್ನು ಸರ್ಕಾರಕ್ಕೆ ಬರಮಾಡಿಕೊಂಡು, ಮಾನ್ಯ ಅರ್ಥಸಚಿವರು ಇನ್ನೂ ಹೆಚ್ಚಿನ ಆಸೆಯಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಧನಪಿಶಾಚಿ ಎಂಬ ಚಲನಚಿತ್ರ ಬಂದಿದೆ. ಅದರಂತೆ ಸರ್ಕಾರಕ್ಕೂ ಧನದ ಆಶೆ ಹುಟ್ಟಿದೆಯೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಅರ್ಥ ಸಚಿವರು ಈ ಬಿಲ್ಲನ್ನು ತರುವುದಕ್ಕೆ ಮುಂಚೆ, ನಾವು ಪಾನನಿರೋಧದಿಂದ ಸರ್ಕಾರಕ್ಕೆ 8–10 ಕೋಟಿ ರೂಪಾಯಿಗಳ ಆದಾಯ ಬರುವುದರಿಂದ ಈಗಿರುವ ತೆರಿಗೆಯನ್ನೇ ಕಡಿಮೆ ಮಾಡಬಹುದೆಂದು ತಿಳಿದಿದ್ದೆವು. ಆದರೆ ಆ ರೀತಿ ಮಾಡದೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಪಾನನಿರೋಧದ ಸಡಿಲಿಕೆಯಿಂದ ಬರುವ ವರಮಾನದಿಂದ ಈಗಿರುವ ತೆರಿಗೆಯನ್ನು ಕಡಿಮೆ ಮಾಡಿದ್ದರೆ ಅಚ್ಚು ಮೆಚ್ಚಿನ ಅರ್ಥಮಂತ್ರಿಗಳಾಗಿ ಪ್ರಖ್ಯಾತಿ ಪಡೆಯುತ್ತಿದ್ದರು ಎನ್ನುವಂಥ ವಿಚಾರವನ್ನು ಈ ಸಭೆಯ ಮುಂದೆ ಇಡುತ್ತಿದ್ದೇನೆ.

ಮುಖ್ಯವಾಗಿ ಮಾನ್ಯ ಸಚಿವರು ಶ್ರೀಮಂತರಿಗೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿ ಈ ಮಸೂದೆಯಲ್ಲಿ ತಿದ್ದುಪಡಿ ಸೇರಿಸಿದ್ದೀರಿ. ಅಂಬರ್ ಚರಕ, ಕಾರ್ಪೆಟ್ಸ್ ಮೇಲೆ ಸೇಲ್ಸ್ ಟ್ಯಾಕ್ಸ್ ರಿಯಾಯಿತಿ ಮಾಡಿರುವುದು ನಿಜವಾಗಿಯೂ ವಿಷಾದದ ಸಂಗತಿ. ಇದಲ್ಲದೆ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವವರಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಎರಡು ವರ್ಷಗಳವರೆಗೆ ಸೇಲ್ಸ್ ಟ್ಯಾಕ್ಸ್ ಕೊಡುವುದನ್ನು ವಿನಾಯಿತಿ ಮಾಡಲು ನೋಟಿಫಿಕೇಷನ್ ತೆಗೆಯುವುದಕ್ಕೆ ಅಧಿಕಾರ ಪಡೆಯಲಾಗಿದೆ. ಹೊಸ ಇಂಡಸ್ಟ್ರೀಸ್ ಪ್ರಾರಂಭ ಮಾಡುವಾಗ್ಗೆ ಎಷ್ಟೊಂದು ಅನಾಹುತ ನಡೆಯುತ್ತಿದೆ ಎಂಬುದು ಅಲ್ಲಿಯ ವ್ಯವಹಾರ ನೋಡಿದಾಗ ನನಗೆ ಅನಿಸುತ್ತದೆ ಇದು ನಿಜವಾಗಿಯೂ ಔದ್ಯೋಗಿಕ ಬೆಳವಣಿಗೆ ಮಾಡುವ ರೂಪದಲ್ಲಿ ಸಾಮಾನ್ಯ ಜನರ ಮೇಲೆ, ಕಾಮನ್ ಕಂಜ್ಯೂಮರ್ಸ್ ಮೇಲೆ ತಲೆಭಾರ ಹಾಕುತ್ತಿದ್ದೀರಿ. ಶ್ರೀಮಂತರ ಭಾರ ಕಡಿಮೆ ಮಾಡಿ ಸಾಮಾನ್ಯ ಜನರ ತಲೆಯ ಮೇಲೆ ಭಾರ ಹಾಕಲಾಗುತ್ತಿದೆ. ಚಿಕ್ಕ ಅಂಗಡಿಕಾರರಿಗೆ ಲೆಕ್ಕ ಪತ್ರ ಇಡುವುದಕ್ಕಾಗುವುದಿಲ್ಲ. ಸಾಮಾನ್ಯ ವ್ಯಾಪಾರಸ್ಥರಿಗೆ ಈ ಸೇಲ್ಸ್ ಟ್ಯಾಕ್ಸ್ ಕಾನೂನು ಮೂಲಕ ಹರ್ಯಾಸ್‌ಮೆಂಟ್ ಆಗುತ್ತದೆ. ಸಾರಾಯಿ ಹೆಂಡ ಇವುಗಳ ಮೇಲೆ ಇನ್ನೂ ಇಪ್ಪತ್ತು ಪಟ್ಟು ಹೆಚ್ಚಿಗೆ ಟ್ಯಾಕ್ಸ್ ಹಾಕಿದರೆ ಅದು ಅನ್ಯಾಯವಲ್ಲ ಅದು ಅಧರ್ಮವಾಗುವುದಿಲ್ಲ. ಆದರೆ ಹಾಲು ಹಣ್ಣು ಜೋಳ ರಾಗಿ ಮುಂತಾದ ಸಾಮಾನ್ಯ ಜನರ ಜೀವನಾವಶ್ಯಕ ವಸ್ತುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಅನ್ಯಾಯ ಇದರಿಂದ ಸಾಮಾನ್ಯ ನಾಗರಿಕರ ಮೇಲೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಿ ಆಹಾರ ಧಾನ್ಯಗಳ ಮೇಲೆ ಇರತಕ್ಕ ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ವಿನಂತಿಸಿ ಈ ಮಸೂದೆ ಬಗ್ಗೆ ನನ್ನ ವಿಚಾರಗಳನ್ನು ತಿಳಿಸಿ ಇದನ್ನು ವಿರೋಧಿಸುತ್ತಾ ನಾನು ಮಾತು ಮುಗಿಸುತ್ತೇನೆ.

Sri RAMAKRISHNA HEGDE.—Sir, I am afraid some of the Hon'ble Members have not properly understood the meaning of the provision. There is no proposal to enhance the rate of sales tax except in regard to declared goods, which will not affect the local consumers. I would like to make it absolutely clear. There is no point in stressing that the tax is being enhanced. It is only in respect of declared goods,

that is inter-State transactions and that will not affect the local consumers. Actually, there is a proposal to reduce the tax in regard to certain items. Actually, this should be welcomed by the Members.

In regard to the delegation of power, there has been some criticism. May I draw the attention of the Hon'ble Members that it is not peculiar when we are asking for such delegation in the State. Practically in every State, this Sales Tax Act contains a provision in which the power is delegated to the Government. Otherwise, it is not possible to anticipate what sort of industries will come, in respect of what items of goods.

These are the only two items dealt with here. I do not think, it will serve any purpose to cover practically the whole theory and practice of taxation and so on.

Sri K. H. PATIL.—By putting this rate, rate will not go down. When we are sending goods to other States, naturally they are the persons to bargain.

Sri M. S. KRISHNAN.—It has to be very carefully considered. It is not so simple as he puts it.

† ಶ್ರೀ ಪಿ. ವಿ. ಐತಾಳ (ನುರತ್ಕರ್).—ಮಾನ್ಯ ಸಚಿವರು ಹೇಳುವ ರೀತಿಯಲ್ಲಿ ಅದು ಇರುವುದಿಲ್ಲ. ಪ್ರಥಮ ಸ್ಟೇಜಿನಲ್ಲಿ ಮಾರಾಟವಾದ ಕೂಡಲೇ ಟ್ಯಾಕ್ಸ್ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಿಂದ ವಸ್ತು ಹೊರಗೆ ಹೋಗುವುದಕ್ಕೆ ಇರತಕ್ಕ ಟ್ಯಾಕ್ಸ್ ಅದು ಅಲ್ಲ. ನಮ್ಮ ರಾಜ್ಯದೊಳಗೇ ಟ್ಯಾಕ್ಸ್ ಕೊಡಬೇಕಾಗುತ್ತದೆ. ಅದೇ ರೀತಿ ಐರನ್, ಸ್ಟೀಲ್, ನಂತರ ಜ್ಯೂಟ್ ಆರ್ಟಿಕಲ್ಸ್ ಕಾಟನ್ ಸೀಡ್ಸ್ ಈ ಎಲ್ಲ ಪದಾರ್ಥಗಳ ಮೇಲೆ ರೇಟ್ ಆಫ್ ಟ್ಯಾಕ್ಸ್ ಜಾಸ್ತಿ ಮಾಡುತ್ತೀರಿ. ಈಗ ಇರತಕ್ಕ ತಿದ್ದುಪಡಿಯನ್ನು ತಾವು ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದು ಕಾಣುತ್ತದೆ. ನಾಲ್ಕನೇ ಷೆಡ್ಯೂರ್‌ನಲ್ಲಿ ಇರತಕ್ಕ ಪದಾರ್ಥಗಳಲ್ಲಿ ಹೆಚ್ಚಾಗಿ ರಾಜ್ಯದೊಳಗೆ ಮಾರಾಟ ಮಾಡುವಾಗ ಪ್ರಥಮ ಸ್ಟೇಜಿನಲ್ಲಿಯೇ ಟ್ಯಾಕ್ಸ್ ಬೀಳುತ್ತದೆ. ಆಯಿಲ್ ಸೀಡ್ಸ್, ಕೋಕೋನಟ್ಸ್ ಮೇಲೆ ಸಹ ಟ್ಯಾಕ್ಸ್ ಬೀಳುತ್ತದೆ. ಆದಕಾರಣ ತಾವು ಪ್ರಥಮತಃ ಹೇಳಿದ್ದು ಸರಿಯಲ್ಲ. ಇದನ್ನು ಪರಿಶೀಲನೆ ಮಾಡುವುದಕ್ಕೆ ತಂಬಾ ಕಾಲಬೇಕು. ಇವತ್ತಿನ ದಿವಸ ಈ ತಿದ್ದುಪಡಿ ಮಸೂದೆಯನ್ನು ಮುಗಿಸುವುದಕ್ಕೆ ಆಗಲಾರದು ಎಂದು ಕಾಣುತ್ತದೆ.

ಶ್ರೀ ಎಸ್. ಚೆನ್ನಯ್ಯ.—ಈಗಾಗಲೇ ವೇಳೆ ಆಗಿದೆ. ನಾಳೆ ದಿನ ಇದನ್ನು ಮುಂದುವರಿಸೋಣ.

ಅಧ್ಯಕ್ಷರು.—ನನ್ನ ಇಚ್ಛೆಯ ಪ್ರಕಾರ ಇರುವುದಿಲ್ಲ. ಸಭೆಯ ಅಭಿಪ್ರಾಯದಂತೆ ಕೆಲಸ ಮಾಡಬೇಕಾಗುತ್ತದೆ. I am appealing to both sides to come to some understanding. What can I do except ascertain the wishes of the House? I am anxious to sit. You feel the sense of the House. In the Business Advisory Committee, two hours were allotted to this. Everybody expected that it will be over. But things have developed in this way.

Sri H. SIDDAVEERAPPA.—Why should we be teased in this way and asked to sit late and go on? Personally we do not know much about it. I plead my ignorance about the subject. My friends have specialised and they say there is a point. Otherwise, you may take a vote on closure and decide the matter.

ಶ್ರೀ ಪಿ. ವಿ. ಐತಾಳ.—ಪಂಚಮೆಂಡಲ್ ರೈಟ್ಸ್ ಇನ್‌ವಾರ್ಡ್ ಆಗಿದೆ. ಅಂಗಡಿ ಮತ್ತು ವಾಸಸ್ಥಳ ಒಂದೇ ಕಡೆ ಇದ್ದರೆ, ಮ್ಯಾಜಿಸ್ಟ್ರೇಟರ ವಾರಂಟ್ ಇಲ್ಲದೆ ಒಳಗೆ ಹೋಗಬಹುದು, ಎಂದಿದೆ. They can enter the shop and cease the goods. There are provisions in the Act which affect the fundamental rights. ಆದಕಾರಣ.....

ಶ್ರೀ ಎಸ್. ನಿಜಲಿಂಗಪ್ಪ.—ನಾಳೆ ಬೆಳಗ್ಗೆ 8 ಗಂಜೆಗೆ ಸೇರಿ ಇದನ್ನು ಮುಗಿಸಬಹುದು.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಬೆಳಿಗ್ಗೆ ಕೊಡುವ ಬದಲು 12 ಗಂಜೆಗೆ ಸೇರಿದರೆ ಒಂದು ಗಂಜೆ ಕಾಲ ಇದಕ್ಕೆ ಸಿಕ್ಕುತ್ತದೆ.

Sri S. NIJALINGAPPA.—May I submit that this is happening often ? I am sorry that what has been accepted in the Business Advisory Committee meeting is not respected here. The only way it can be done is, sit in the morning tomorrow for one or two hours and decide it. Let us sit from 8 to 9 and finish it.

Mr. SPEAKER.—Now the House stands adjourned to meet tomorrow at 8 A.M.

*The House adjourned at Thirty Minutes past Six of the Clock to meet again at Eight of the Clock on Friday the 15th December 1967.*